Koravanji

ಕೊರವಂಜಿ

ಜೂಲೈ ೧೯೫೧



★

ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಹಾ. ರಾ.
ಶ್ರೀ|| ಪ್ರಸಾದ್
ಶ್ರೀ|| ಶನಿ
ಶ್ರೀ|| ಮಾ. ರಾ. ಅ.
ಶ್ರೀಮತಿ ಟಿ. ಸುನಂದಮ್ಮ
ಶ್ರೀ|| ರೇವಣ್ಣ
ಶ್ರೀ|| ಕೇಸರಿ
ಶ್ರೀಮತಿ ರುದ್ರಮ್ಮ
ಶ್ರೀ|| ಸಶೇಷ
ಶ್ರೀ|| ಶಂಭು
ಶ್ರೀ|| ದಾಶರಥಿ ದೀಕ್ಷಿತ್.
ಶ್ರೀ|| ರಾವುತ್
ಶ್ರೀ|| ಪಾಟೀಲ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ:— ಕೇವಲ ನಾಲ್ಕಾಣೆ.




ಅವಳ ಮನಮೋಹಕ ಸೌಂದರ್ಯಕ್ಕೆ
ಕಾರಣ ವೆಂದರೆ
"RAJA"
"SNOW"
MANYAM & CO.
RAJA
SNOW
ರಾಜಾ
ಸ್ನೋ
FEDERAL S-616.
MANYAM & CO., BANGALORE, MADRAS, MADURA, BOM


ಶಾಲಿಮಾರ್ ಸಾಮಗ್ರಿಗಳು ಬೇಕೆಂದು ಬರೆಯುವಾಗ ಅವು ಯಾವ ಕೆಲಸಕ್ಕೆಂದು ಸ್ಪಷ್ಟವಾಗಿ ತಿಳಿಸಿರಿ

ಎಣ್ಣೆ ಸೇರಿದ

ಡಿಸ್ಟೆಂಪರ್

ನೀರಿನಿಂದ ತೊಳೆದು

ಹೋಗುವುದಿಲ್ಲ



ಡ್ಯೂರಡೋಲ್ ಬಣ್ಣದ ರಕಮುಗಳಲ್ಲಿ ಮನೋಹರವಾದ 46 ಬಗೆಯ ಹಚ್ಚುವ ಛಾಯೆಗಳಿವೆ. ಒಳಗಿನ ಮತ್ತು ಹೊರಗಿನ ಗೋಡೆಗಳಿಗೆ ಹಚ್ಚಲು ಇದಕ್ಕಿಂತಲೂ ಉತ್ತಮವಾದ ಎಣ್ಣೆ ಸೇರಿದ, ತೊಡೆಯಬಹುದಾದ ಡಿಸ್ಟೆಂಪರು ಇಲ್ಲವೇ ಇಲ್ಲ. ಡ್ಯೂರಡೋಲ್ ಉಜ್ಜಿದರೂ, ನೀರು ಹಾಕಿ ತೊಳೆದರೂ ಹೋಗಲಿಕ್ಕಿಲ್ಲ.

ಸ್ಪಷ್ಟವಾಗಿ ಹೇಳಿರಿ... ಶಾಲಿಮಾರ್

ಡ್ಯೂರಡೋಲ್

ಎಣ್ಣೆ ಸೇರಿದ, ತೊಡೆಯಬಹುದಾದ ಡಿಸ್ಟೆಂಪರು

SPX 53 KN

SHALIMAR PAINT, COLOUR & VARNISH CO., LTD.,
Post Box 136, Madras 1


ಸಹಜವಾಗಿಯೂ ...
ಒಳ್ಳೆಯ
ತಿಂಡಿಗಳನ್ನು
ತಯಾರಿಸಲು
"ನಂದಿ" ಯೇ
ಅತ್ಯುತ್ತಮವಾದುದು
ನಂದಿ
ವನಸ್ಪತಿ
ಹೈಡ್ರೋಜನೇಟ್ ಆದ ಕಡಲೆ
ಕಾಯಿ ಎಣ್ಣೆ. ವಿಟಮಿನ್ನು
ಗಳಿಂದ ಕೂಡಿದ ತಯಾರಿಕೆ
ದಿ ಮೈಸೂರು ವೆಜಿಟೆಬಲ್ ಆಯಿಲ್ ಪ್ರಾಡಕ್ಟ್ಸ್ ಲಿಮಿಟೆಡ್
ಬೆಂಗಳೂರು ಮತ್ತು ಮದ್ರಾಸು
MVZ-19 KN



ಸಂಪುಟ ೧೦ | ಜುಲೈ ೧೯೫೧ | ಸಂಚಿಕೆ ೪

ಅರವತ್ತಕ್ಕೆ ಅಭಿನಂದನೆಗಳು

“ಅರವತ್ತಕ್ಕೆ ‘ಅರಳು ಮರಳು’” ಎಂದು ಗಾದೆ. ಹೇಗಪ್ಪಾ! ಜನ ಇಂತಹ ಸನ್ನಿವೇಶದಲ್ಲಿ ಹಬ್ಬ ಅಂತ ಆಚರಿಸುತ್ತಾರಲ್ಲಾ! ಎಂದೇ, ಅಂದುಕೊಂಡಿದ್ದೆ. ಮೊನ್ನೆ ಕನ್ನಡದ ಶ್ರೀನಿವಾಸನ, ವೈಯ್ಯಕ್ತಿಕವಾಗಿ ಶ್ರೀ ಮಾಸ್ತಿಯವರ ಅರವತ್ತು ವರ್ಷದ ಹಬ್ಬನ್ನು ಕನ್ನಡಿಗರೆಲ್ಲಾ, ಸಾಹಿತಿಗಳೆಲ್ಲಾ, ಆಚರಿಸಿದಾಗ ಇದರ ಅರ್ಥ ತಿಳಿಯಿತು. ಕೆಲವರಿಗೆ ಅರವತ್ತಕ್ಕೆ ದಿಟವಾಗಿಯೂ ಅರಳು ಮರಳು ಆಗುತ್ತದೆ. ಅವರು ಮೊಮ್ಮಕ್ಕಳನ್ನು ತುಕ್ಕಳ ಗಾಡೀಲಿ ನೂಕಿಕೊಂಡು, ಮಾರುಕಟ್ಟೇಗೆ ಹೋಗಿ, ಕ್ಯೂ ನಿಂತು, ತರಕಾರಿ ತರುತ್ತಾರೆ ಮಾರನೇ ದಿನದ ಅಡಿಗೆಗೆ.

ಇನ್ನು ಕೆಲವರು, ಪೂರ್ವ ಸಂಸ್ಕೃತಿಯ ಫಲವಾಗಿ, ಪೂರ್ಣ ಅನುಭವದ ಫಲವಾಗಿ, ಹೇರಳ ವ್ಯಾಸಂಗ, ಮನನದ ಫಲವಾಗಿ, ಅರವತ್ತಕ್ಕೆ ಮಿಕ್ಕೆಲ್ಲರಿಗೂ ಅರಳು ಮರಳು ಆಗುವಂತೆ ಮಾಡುತ್ತಾರೆ. ಅಂತಹವರು ಒಂದು ಪಂಕ್ತಿ ಬರೆಯಲಿ, ಒಂದೇ ಪಂಕ್ತಿಯಲ್ಲಿ ಊಟಕ್ಕೆ ಕೂತಾಗ ಒಂದು ಮಾತಾಡಲಿ, ಒಂದೊಂದೂ ಅನುಭವದ ಆಣಿಮುತ್ತಾಗಿರುತ್ತದೆ. ಕೇಳಿದವರಿಗೆ ಮಂಕು ಬೂದಿ ಎರೆಚಿದಂತಾಗುತ್ತದೆ.

ನಗುಸರಿಸಿ ಶ್ರೀ ಮಾಸ್ತಿಯವರು ಈ ಗುಂಪಿಗೆ ಸೇರಿದವರು. ನಮ್ಮ ಮಾಸ್ತಿಯವರ ಭೀಮ ಶಾಂತಿ, ಸಹಸ್ರ ಚಂದ್ರ ದರ್ಶನ; ಪೂರ್ಣಾಯುಸ್ಸಿನ ಶಾಂತಿ ಇವುಗಳನ್ನು ಆಚರಿಸುವ ಸೌಭಾಗ್ಯ ನಮ್ಮದಾಗಲಿ ಎಂದೇ ಕೊರವಂಜಿಯ ಪ್ರಾರ್ಥನೆ.

ಕು ಹ ಕಿ ಡಿ ಗ ಳು

★ ★

ಎ. ಐ. ಸಿ. ಸಿ. ಅಧಿವೇಶನವನ್ನು "ಗಾಜಿನ ಮನೆ"ಯಲ್ಲಿ ನಡೆಸಲೇರ್ಪಾಡಾಗುತ್ತಿದೆಯಂತೆ.

—ಕೃಪಾಲಿನಿ ಇತ್ಯಾದಿಗಳಿಗೆ ಸಂತೋಷದ ಸುದ್ದಿ! ಆ ಮನೆಯಲ್ಲಿದ್ದವರು ಕಂಡವರ ಕಡೆಗೆ ಹಿಂತಿರುಗಿ ಕಲ್ಲೆಸೆಯಲಾರರು ಎಂದು!

* * *

"ಸಾಲವನು ಕೊಂಬಾಗ ಪಾಲೋಗರುಂಡಂತೆ" ಎಂದು ಆಹಾರ ಸಚಿವ ಮುನ್ಷಿಯವರಿಗೆ, ಬಾನುಲಿಯ ಭಾಷಣಬೊಬ್ಬೆ ಮುಗಿದಾಗ ಯಾರೋ ಹೇಳಿದರಂತೆ.

—ಶ್ರೀ ಮುನ್ಷಿಯವರು "ಸಾಲವನು ತೀರ್ವಾಗ", ನಾನು ಆಹಾರ ಸಚಿವನಾಗಿರುವುದಿಲ್ಲ ಎಂದು ಮಾರುತ್ತರಿಸಿದರೆಂಬುದು ಸುಳ್ಳಂತೆ.

* * *

೧೯೪೨ರ ಪತ್ರಿಕೆಯಲ್ಲಿನ ಸುದ್ದಿಯ ತುಂಡು.

"ಸತ್ಯಾಗ್ರಹಿಗಳನ್ನು ಲಾರಿಯಲ್ಲಿ ಕರೆದುಕೊಂಡು ಹೋಗಿ ಊರಾಚೆ ಬಿಟ್ಟುಬರಲಾಯಿತು."

೧೯೫೨ರ ಪತ್ರಿಕೆಯಲ್ಲಿನ ತುಂಡು ಸುದ್ದಿ.

ಕಾಗೋಡಿನಾಚೆಯ ಕಾಡಿನಲ್ಲಿ ಸತ್ಯಾಗ್ರಹಿಗಳನ್ನು ಬಿಟ್ಟುಬರಲಾಯಿತು.

—ಪ್ರಗತಿ!

* * *

ಜೂಜಿನ ಜೂನ್ ತಿಂಗಳಲ್ಲಿ ನಮ್ಮ ಪತ್ರಿಕೆಗಳವರು ಮಾಸ ಭವಿಷ್ಯದ ಬದಲು, ತುರಗ ಭವಿಷ್ಯ ಬರೆದು ಹೇರಳ ಹಣ ಸಂಪಾದಿಸಿ ಕುದುರೆ ಜೂಜಿಗೆ ಹೋಗುತ್ತಾರೆ ಅಂತಿದ್ದೆ.

—ಯಾರಿಗೂ ಈ ಯೋಚನೆ ಹೊಳೆದಂತೆ ಕಾಣಲಿಲ್ಲ! ಅಯ್ಯೋ! ಪಾಪ!!

* * *

ಆಗ ಲಂಕೆಗೆ ಬೆಂಕಿ ಹತ್ತಲು ಕಾರಣ ಈಗ ಗೊತ್ತಾಗಿದೆಯಂತೆ.

—ರಾವಣನ ಲೆಕ್ಕದ ಪುಸ್ತಕವನ್ನೆಲ್ಲಾ ಹನುಮಂತನ ಬಾಲಕ್ಕೆ ಕಟ್ಟಿದ್ದರಂತೆ, ಲೆಕ್ಕಾಧಿಕಾರಿಗಳು ತನಿಖೆಯ ಮುನ್ನ.

* * *

ಉರಿಗಾಳಿ

ಹೊಸದಾಗಿ ಸ್ಥಾಪಿತವಾದ ರಾಜಕೀಯ ಪಕ್ಷವೊಂದಕ್ಕೆ ಯಾವ ನಾಮ ಹಾಕುವುದು, ಎಂಬುದು ದೊಡ್ಡ ಸಮಸ್ಯೆಯಾಗಿದೆ (ಸುದ್ದಿ) ಈ ಸಮಸ್ಯೆಯನ್ನು ವೋಟರುಗಳೇ ನಿರ್ಧರಿಸುವರಲ್ಲವೆ ?

*　　*　　*

ಧ್ವನಿವಾಹಕ ಯಂತ್ರಗಳು ರಸ್ತೆಗಳಲ್ಲಿ ಹೊಡೆದುಕೊಳ್ಳುತ್ತಿದ್ದರೂ ರಂಗೂನ್ ನಗರದ ಮತದಾರರು ಬಹುಮಂದಿ ತಂತಮ್ಮ ಮನೆಯಲ್ಲೇ ಉಳಿದರು (ವರದಿ) ಹಾಗೆ ಹೊಡೆದುಕೊಳ್ಳುತ್ತಿದ್ದರಿಂದಲೇ ಅವರು ಹಿಂಜರಿದಿರಬಹುದು.

*　　*　　*

ವೈದ್ಯರುಗಳೆಲ್ಲ ನಗರವಾಸವನ್ನು ಅಪೇಕ್ಷಿಸುತ್ತಿದಾರೆ; ಅವರನ್ನು ಗ್ರಾಮಗಳಿಗೆ ಕಳುಹಿಸಿದರೆ, ಹೇಗೋ ಪ್ರಭಾವ ಬೀರಿ, ನಗರಗಳಿಗೆ ವರ್ಗಮಾಡಿಸಿಕೊಳ್ಳುತ್ತಿದಾರೆ (ಮುಖ್ಯಮಂತ್ರಿ) ನಮ್ಮ ರೈತ ಬಾಂಧವರು ನಿಜವಾಗಿಯೂ ಪುಣ್ಯವಂತರೆಂಬುದಕ್ಕೆ ಇದೂ ಒಂದು ನಿದರ್ಶನ.

*　　*　　*

ಭಾರತೀಯರೆಲ್ಲ ಏಕ ಭಾಷೆಯ ಮೂಲಕ ವ್ಯವಹರಿಸಿದರೆ ದೇಶದಲ್ಲಿ ಒಗ್ಗಟ್ಟಿನಿಂದ ಕೆಲಸಮಾಡಲು ಸಾಧ್ಯ (ಬಾಳಗಂಗಾಧರ ಖೇರ್) ಹಲವರು ಗಾಂಧಿ ಕಿ ಜೈ ಎಂದಾಗ ಒಂದರ್ಥ, ಇನ್ನು ಹಲವರು ಗಾಂಧಿ ಕಿ ಜೈ ಎಂದಾಗ ಇನ್ನೊಂದರ್ಥ, ಹೀಗಾಗಬಾರದು, ನಿಜ.

*　　*　　*

ತಾನು ಬರೆವಣಿಗೆ ಪ್ರಾರಂಭಿಸಿ ೨೫ ವರ್ಷಗಳು ಮುಗಿಸಿದ ರಜತ ಮಹೋತ್ಸವವನ್ನು ಜೂನಿಯರ್ ಫೆಯಿಲ್ ಜಂಬಣ್ಣನವರು ಮೊನ್ನೆ ವಿಜೃಂಭಣೆಯಿಂದ ಮಿತ್ರರಿಂದ ಆಚರಿಸಿಕೊಂಡರು.

*　　*　　*

ಮೇಷ್ಟರುಗಳಿಲ್ಲದೆ ಶಾಲೆಗಳು ನಡೆಯುಬಹುದಾದರೆ, ವಿದ್ಯಾರ್ಥಿಗಳಿಲ್ಲದೆ ಏಕೆ ನಡೆಯುಬಾರದು, ಎಂದು ಊರಿನವರು ಸಂಬಂಧಪಟ್ಟ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸವಾಲು ಹಾಕಿರುವರಂತೆ.

*　　*　　*

೫೦೦ ವರ್ಷಗಳ ಹಿಂದಿನ ಭಾರಿ ಶಂಖವೊಂದು ಚಂದ್ರ ನಗರದ ಕೆರೆಯಲ್ಲಿ ದೊರೆತಿದೆ (ಸುದ್ದಿ) ಸಧ್ಯಃ, ಚುನಾವಣೆ ಹೊತ್ತಿಗಾದರೂ ದೊರೆಯಿತಲ್ಲಾ.

*　　*　　*

ಬೇಕಾಗಿದಾರೆ : ಹಿಸ್ಟರಿ ಗ್ರ್ಯಾಜುಯೇಟ್‌ಗಳು : ಸಾಮರ್ಥ್ಯಕ್ಕೆ ತಕ್ಕ ಸಂಬಳ : ರಾಜಕೀಯ ನಾಯಕರ ಹಿಂದಿನ ಬಾಳನ್ನು ಸಂಶೋಧಿಸಿ ಚುನಾವಣಾ ಪ್ರಚಾರಕ್ಕೆ ಅನುಕೂಲವಾದ ಉಪಕಥೆಗಳನ್ನು ಆರಿಸಿಕೊಡುವ ಕೆಲಸಕ್ಕಾಗಿ. (ಜಾಹಿರಾತ್)

* * *

ಕೃಪಲಾನಿ ಪಕ್ಷದವರು ಪಾನನಿರೋಧವನ್ನು ಅನುಮೋದಿಸಿ, ಅದನ್ನು ಸೈನ್ಯಕ್ಕೂ ಅನ್ವಯಿಸುವ ಭರವಸೆ ಕೊಟ್ಟಿರುವುದರಿಂದ, ಕಳ್ಳಭಟ್ಟಿ ಇಳಿಸುವ ಮಹಾಜನಗಳ ವೋಟೆಲ್ಲ ಅವರಿಗೆ ಖಂಡಿತ ದೊರೆಯುವುದು ಎಂದು ಒಬ್ಬರು ಭವಿಷ್ಯ ನುಡಿದಿರುವರು.

* * *

ಎ. ಐ. ಸಿ. ಸಿ. ಅಧಿವೇಶನವು ಈಸಲ ಮಾದರಿ ಸಂಸ್ಥಾನದ ಆಡಳಿತ ಕೇಂದ್ರವಾದ ಕಲ್ಯಾಣಪುರಿಯಲ್ಲಿ ಸೇರುವುದು ನಮಗೆಲ್ಲ ಸಂತೋಷವನ್ನುಂಟುಮಾಡುತ್ತಿದೆ." (ಬೆಂಗಳೂರು ಪತ್ರಿಕೆ) ಹಾಗಾದರೆ ಮೈಸೂರು ಸಂಸ್ಥಾನದ ಆಡಳಿತ ಕೇಂದ್ರವಾದ ಬೆಂಗಳೂರಲ್ಲಿ ಎ. ಐ. ಸಿ. ಸಿ. ನಡೆಯುವುದು ಎಂಬ ಸುದ್ದಿ ಸುಳ್ಳೇನು?

* * *

"ಜೋಗದ ಗುಂಡಿ ತಯಾರಾಗಲು ಲಕ್ಷಾಂತರ ಸಂವತ್ಸರಗಳಾಗಿರಬೇಕು" (ವೈಜ್ಞಾನಿಕ ಭಾಷಣ) ಏಕೆ? ಆಗಲೂ ಪಿ. ಡಬ್ಲ್ಯು. ಡಿ. ಇಲಾಖೆಯವರಿದ್ದರೇನು?

* * *

ಮೀನು ಹಿಡಿದು ಮಾರುವವರಿಗೆ ಸರ್ಕಾರ ಕಡಮೆ ದರದಲ್ಲಿ ಉಪಕರಣಗಳನ್ನೊದಗಿಸಲು ನಿರ್ಧರಿಸಿರುವರು (ಸುದ್ದಿ) ಇದೂ ಒಂದು ತೆರನ ಗಾಳವೆ.

* * *

ಈಗ ಕೊಡತ್ತಿರುವ ರೇಷನ್ ಅಕ್ಕಿ ಪ್ರಮಾಣವನ್ನು ಜೂಲೈ ಒಂದರಿಂದ ಖಂಡಿತವಾಗಿಯೂ ಹೆಚ್ಚಿಸಲಾಗುವುದು (ಪತ್ರಿ) ಅಂದರೆ, ಕಲ್ಲು ಕಡಮೆ ಇರಬಹುದೆಂದು ಊಹಿಸೋಣವೆ?

* * *

ನೂರು ಮೈಲಿ ಅಡ್ಡಳತೆ ಇರುವ ಒಂದು ಹೊಸ ನಕ್ಷತ್ರವನ್ನು ಡಾ|| ಹಾರ್ಲೊ ಎಂಬುವರು ಕಂಡುಹಿಡಿದಿದಾರೆ....ಆಕೆ ಯಾವ ಫಿಲಂನಲ್ಲಿ ಪಾತ್ರವಹಿಸುತ್ತಾಳೋ ನೋಡೋಣ ಎಂದು ಎಲ್ಲರೂ ಕುತೂಹಲರಾಗಿದ್ದಾರೆ.

ಮಹಾ ಘನಹೊಂದಿದ ಸಾರ್ವತ್ರಿಕ ಕಸುಬು ಶಾಲೆಯ ಮುಖ್ಯೋಪಾಧ್ಯಾಯರಿಗೆ—

ಮಹಾಸ್ವಾಮಿ,

ನಿಮ್ಮ ಶಾಲೆಯಲ್ಲಿ ವ್ಯಾಸಂಗಮಾಡಲು ನಾನು ಇಷ್ಟಪಡುತ್ತೇನೆ. ನನ್ನ ಭಾವೀ ಸೌಭಾಗ್ಯವನ್ನು ನೋಡಿಕೊಳ್ಳಲು, ಇತ್ತೀಚೆಗೆ ಮಾರ್ಪಾಡಾದ ಭಾರತದ ರಾಜ್ಯಾಂಗದ ಕಲಂಗಳಿವೆ. ನನಗೆ ಅವಕಾಶ ದೊರಕಿಸಿಕೊಟ್ಟರೆ ನಿಮಗೆ ಕ್ಷೇಮ.

ಇತಿ ನಿಮ್ಮ ಕ್ಷೇಮಾಭಿಲಾಷಿ,
ವ್ಯಾಸಂಗಿ.

೧.	ಹೆಸರು ಓಂ! ನಮಶ್ಶಿವಾಯ!	ಹೇಳಬಹುದಾದ ಹೆಸರು ಶ್ರೀ ಬಸವರಾಯ್ಯ	ಕಾರಣ ಕೇಂದ್ರಾಧಿಕಾರಿಯ ಡ್ರೈವರ್
೨.	ವಯಸ್ಸು ೨೮	ಹೇಳಬಹುದಾದ ವಯಸ್ಸು ೧೮	ಕಾರಣ ಜಾತಕ, ನಕ್ಷತ್ರ ಇಲ್ಲಾ!
೩.	ತಂದೆಯ ಹೆಸರು ಓಂ! ಪರಮೇಶ್ವರ!	ಹೇಳಹುದಾದ ಹೆಸರು ಶ್ರೀ ಹರೇ ಈಶ್ವರ ಜಾದೂ (ಕೇಂದ್ರ)	ಕಾರಣ ತಾಯಿ ಸತ್ತು ೨೭ವರ್ಷ
೪.	ಕೊಟ್ಟ ಉನ್ನತ ಪರೀಕ್ಷೆ ಲೋಫರ್ ಸೆಕೆಂಡರಿ	ಹೇಳಬಹುದಾದ ಪರೀಕ್ಷೆ ಇಂಟರ್ ಮೀಡಿಯೇಟ್ ನಲ್ಲಿ ದಬ್ಬಿದ್ದಾರೆ	ಕಾರಣ ನಿಮಗೂ ತಿಳಿದಿರಲ್ಲಿಕ್ಕೇ ಬೇಕು
೫.	ವೈದ್ಯರ, ಇತರರ ಸರ್ಟಿಫಿಕೇಟುಗಳು ಇದೆಯೇ ಹ್ಞೂ	ಹೇಳಬಹುದಾದ ಸರ್ಟಿಫಿಕೇಟುಗಳು ಭಾವೀ ಮಾನವರದು	ಕಾರಣ "ಡಿಟೋ" ॥೪॥
೬	ತಂದೆ-ವಾ-ಗಾರ್ಡಿಯನ್ನರ ಒಪ್ಪಿಗೆ ಇದೆ	ಹೇಳಬಹುದಾದ.... ಇದೆಯೇ! ಮಾವ "ಹ್ಞೂ" ಅಂದಿದ್ದಾರೆ	ಕಾರಣ "ಡಿಟೋ" ॥೪॥

ವಿಳಾಸ

ಹುಟ್ಟಿದ ವಿಳಾಸ. (ತಾತ್ಕಾಲಿಕ)
ಕಾಡುಮೋಡು ಪೋಸ್ಟ್,
ಕಾಡುಮೋಡು.

ಇನ್ನು ಮೇಲೆ ಬೆಳೆಯುವ ವಿಳಾಸ (ಖಾಯಂ)
ಅ/ಅ ಶ್ರೀ ಹರೇ ಈಶ್ವರ ಜಾದೂ
ರಾಜಕಾರಣಿ ಹಾಗೂ ಮಾಜಿ ...ಇತ್ಯಾದಿ.
ನವದೆಹಲಿ.

ನೀತಿಯ ಕತೆಗಳು

(ಬಲಿತವರಿಗೆ)

ಒಂದು ದೊಡ್ಡ ಮರದ ಮೇಲೆ ಒಂದು ಕಾಗೆ ಗೂಡು ಕಟ್ಟಿಕೊಂಡು, ಸಂಸಾರ ಹೂಡಿತ್ತಂತೆ. ಆಗಿಂದಾಗ್ಗೆ ಮೊಟ್ಟೆ ಇಟ್ಟು ಅದರ ಮೇಲೆ ಕೂತು ಕೊಂಡು ನಲಿಯುತ್ತಾ ಇತ್ತಂತೆ.

ಮರದ ಕೆಳಗಿನ ಪೊಟರೇಲಿ ಒಂದು ಘಟಸರ್ಪ ಇತ್ತಂತೆ—ಕಾಳಿಂಗ ಸಾಗರ ಅಂತಾರಲ್ಲಾ ಅಂಥಾದ್ದು. ಈ ಕಾಗೆ ಮೊಟ್ಟೆ ಇಟ್ಟು, ಹೊಟ್ಟೆ ಪಾಡಿಗೆ ಹೊರಗೆ ಹೋದಾಗ ಈ ಕಾಳಿಂಗ ಮರಹತ್ತಿ, ಕಾಗೆ ಮೊಟ್ಟೆನೆಲ್ಲಾ ಗುಳಕ್ಕಂತ ನುಂಗುತ್ತಿತ್ತಂತೆ.

ಮೂರು ಸಂತಾನ ಹೀಗೆ ಆಯ್ತಂತೆ. ಹೆಣ್ಣು ಕಾಗೆ ಗಂಡು ಕಾಗೇಗೆ ಹೇಳ್ತಂತೆ, ಹೊತ್ತೂ ಹೆತ್ತೂ ಕಾಳಿಂಗನ ಹೊಟ್ಟೇಗೆ ಹಾಕುಕ್ಕೆ ನನ್ನಿಂದ ಆಗುಲ್ಲ. ವಿವಾಹ ವಿಚ್ಛೇದ ಮಾಡಿಕೊಳ್ಳೋಣ ಅಂತ. ಗಂಡು ಕಾಗೆ ಹೇಳ್ತಂತೆ "ದುಡುಕಬೇಡ ಇದಕ್ಕೆ ಉಪಾಯ ಮಾಡ್ತೀನಿ" ಅಂತ.

ಧರ್ಮಸಾಗರನ ಮಗಳು ಹತ್ತಿರಿದ್ದ ಕೆರೆಗೆ ಸ್ನಾನಕ್ಕೆ ಬಂದಳಂತೆ. ಒಡವೆ ವಸ್ತ್ರ ತೆಗೆದಿಟ್ಟು ಸ್ನಾನಕ್ಕೆ ಇಳಿದಳಂತೆ. ಕಾಗೆ ಆ ಒಡವೇನ ಕಚ್ಚಿಕೊಂಡು ಬಂದು ಕಾಳಿಂಗನ ಪೊಟರೇಲಿ ಹಾಕಿತಂತೆ. ಇದನ್ನೆಲ್ಲಾ ಮಗಳ ಜತೆಯಲ್ಲಿದ್ದ ರಕ್ಷಕರೂ ದಾದಿಗಳೂ ನೋಡಿದರಂತೆ.

ಆಯುಧ ಸಮೇತ ಅವರು ಬಂದರಂತೆ. ಪೊಟರೇಲಿ ಥಳ ಥಳ ಅಂತ ಕಾಣಿಸ್ತಂತೆ. ಒಬ್ಬ ಒಂದು ಕಲ್ಲು ಎಸೆದನಂತೆ. ಬುಸ್ ಅಂತ ಕಾಳಿಂಗ ಮೇಲಕ್ಕೆ ಎದ್ದಿತಂತೆ. ಹಾಗೆ ಎದ್ದಾಗ ಚಿನ್ನದ ಪದಕ ಅದರ ಹೆಡೆ ಮೇಲೆ ಕೂತಿತ್ತಂತೆ.

ಆ ರಕ್ಷಕರೆಲ್ಲರೂ ಬೆಚ್ಚಿದರಂತೆ. "ನಾಗಮಣಿ ಇರುವ ಕಾಳಿಂಗ ಇದು. ಧನ ಕಾಯುತ್ತಿದೆ. ಇದರ ಮುಖ ನೋಡಿದರೆ ನಮ್ಮ ಸಾಹುಕಾರರ ಹಾಗೇ ಕಾಣುತ್ತೆ. ಅದೇ ಬಣ್ಣ, ಅದೇ ಸೇಡು, ಅದೇ ಕೋಪ, ಅದೇ ಐಶ್ವರ್ಯ, ಇದರ ಸಹವಾಸಕ್ಕೆ ಹೋದರೆ ನಮಗೆ ಉಳಿಗಾಲವಿಲ್ಲ" ಎಂದು ಎಲ್ಲರೂ ಬೇಗ ಬೇಗ ಓಡಿಹೋಗಿ ಹಾಲು ತಂದು, ತನಿ ಎರೆದರಂತೆ. ಕರ್ಪೂರ ಹಚ್ಚಿ ಮಂಗ


ಆರತಿ ಮಾಡಿದರಂತೆ. ದಿನಾಲೂ ಹೀಗೆ ಪೂಜೆ ಮಾಡುತ್ತೇವೆ ಎಂದು ಹರಸಿಕೊಂಡರಂತೆ.

ಕಾಳಿಂಗ ಈಗ ಕಾಗೆ ಮೊಟ್ಟೆ ನುಂಗಿ ನಂತರ ಹೊಟ್ಟೆ ತುಂಬಾ ಹಾಲು ಕುಡಿಯುತ್ತಿದೆಯಂತೆ.

“ಇದು ವಿಧಿ” ಎಂದು ಕಾಗೆ ದಂಪತಿಗಳು ಅಳುತ್ತಾ ಜೀವನ ಮಾಡುತ್ತಿವೆಯಂತೆ.

ನೀತಿ:—ಯಾತ ಕಾನೂನು ಬರಲಿ ಕಡೆಗೆ ಕಾಳಿಂಗನ ಸಂತೇಲಿ ಕಾಳಿಂಗನಿಗೇ ಪೂಜೆ.

★



ಏನ್ರೀ! ನಿಮ್ಮ ಹಾಗೇ ನನಗೂ ಬಾಡಿ ಬಿಲ್ಡ್ ಮಾಡ್ತೀರಾ.

ಒಗಟುಗಳು

(ಬಿಡಿಸುವಿರಾ ? ಅಹಾ !)

(೧)

ಹಸಿರು ಬನದೊಳಗೆ ಬಿದಿರು ಕೋಟೆಯ ಕಂಡೆ
ಒಳಗೆ ಸೋಜಿಗ ಕಂಡೆ—ಬಳೆಯು ತೊಡಿಸುವುದು
ಹುರಿಗಾಳು ಮೆಲ್ಲುವುದು ಕಂಡೆ ಸರ್ವಜ್ಞ ॥

(೨)

ಕಾಲಿಲ್ಲ ತೋಳಿಲ್ಲ ಮೇಲೇರಿ ಮೆರುವುದು
ನಾಲಿಗಿಲ್ಲದೆ ಉಲಿಯುವುದು ಅದರ ಬಲದಿಂ
ಕಾರ್ಯಸಾಧಿಪ ಪುಥಾಂಗಳಿದ ಪೇಳಿ ಸರ್ವಜ್ಞ ॥

(೩)

ರೆಕ್ಕೆ ಪುಕ್ಕಗಳಿಲ್ಲ ಮೇಲೆ ಹಾರುವರು
ಕೊಂಬುಗಳಿಲ್ಲ ತಿವಿಯುವರು ಹಿರಿಯು
ರಿವರಾರು ಬಲ್ಲವರು ಹೇಳಿ ಸರ್ವಜ್ಞ ॥

(೪)

ಹಿರಿಯಾಸೆ ತೋರುವರು ಮಾತಿನ ಮಳೆ ಕರೆವರು
ಜಾರಿಬಿದ್ದರದೂ ವರಸೆ ಎನ್ನುವನು, ರಾಜಕೀಯದ
ಹದನರಿತಿವರಾರು ಹೇಳಿ ಸರ್ವಜ್ಞ ॥

(೫)

ಹತ್ತು ಸಾವಿರ ಕಾಲು, ಐದು ಸಾಸಿರ ಶಿರವು
ನಿಮಿಷ ನಿಮಿಷಕೂ ಬೆಳೆಯುವುದು ಲೋಕ
ದೊಳಗೆಲ್ಲ ಬಸ್ ಸ್ಟಾಪಿನೊಳು ಸರ್ವಜ್ಞ ॥

(೬)

ಹೋಟಲಯ್ಯರ ಮೇಲೆ ರೇಗಿಬಿದ್ದುದು ಕಂಡೆ
ನೋಟನ ಕಂತೆ ಹೊತ್ತಕರ ಕಂಡೆ ಸಪ್ಲೆ
ಸಾಹೇಬರಾ ಮೊಗದಲ್ಲಿ ಮುಗುಳ್ನಗೆಯ ಕಂಡೆ ಸರ್ವಜ್ಞ ॥

ಉತ್ತರಗಳು :—

೧) ವಸ್ತ್ರ ಪ್ರದರ್ಶನ. ೨) ಗಾಂಧಿ ಟೋಪಿ. ೩) ರಾಜಕಾರಣಿ.
೪) ಚುನಾವಣೆಗೆ ನಿಲ್ಲುವ ಉಮೇದುವಾರ. ೫) ಕ್ಯೂ.
೬) ಲಂಚ.

—ಹಾ. ರಾ.

ನಾಚಿಕೆ ಪರೀಕ್ಷೆ

(ಐ. ಎ. ಎಸ್. ಮುಂತಾದ ಉನ್ನತ ಹುದ್ದೆಗಳಿಗಾಗಿ ಅರ್ಜಿ ಹಾಕಿಕೊಳ್ಳುವ ಉಮೇದುವಾರರಿಗೆ ಹಾಕುವಂಥದ್ದು)

೧. ನಿಮ್ಮ ಭಾವಮೈದುನ—ಬಿ. ಎ. ಫೈಲಾದ ಬೃಹಸ್ಪತಿ—ಅವನಿಗೆ ಕನಿಷ್ಟ ಪಕ್ಷ ೫೦೦ ರೂ. ಪಗಾರ ಬರುವಂತೆ ನೌಕರಿ ಕೊಡಿಸಬೇಕಾದರೆ, ತತ್ಸಂಬಂಧವಾದ ಸರ್ಕಾರಿ ಜಾಹಿರಾತನ್ನು ಯಾವ ರೀತಿ ಪ್ರಕಟಿಸುತ್ತೀರಿ?

೨. ಪ್ರಯಾಣ ಭತ್ಯವನ್ನು ಆದಷ್ಟು ಹೆಚ್ಚು ಪಡೆಯಲು ಏನೇನು ಉಪಾಯ ಹೂಡಬಲ್ಲಿರಿ? ಪೆಟ್ರೋಲನ್ನು ಉಚಿತವಾಗಿ ಅವರಿಂದ ಪಡೆಯುವ ಬಗೆ ಹೇಗೆ? ಅವರಿವರು ಎಂದರೆ ಯಾರು, ಯಾರು? ನಿಮ್ಮ ಸ್ವಂತ ಕೆಲಸಕ್ಕಾಗಿ ಬೇರೆ ಊರಿಗೆ ಹೋಗಬೇಕಾಗಿ ಬಂದಾಗ, ಆ ಖರ್ಚನ್ನೂ ಸರ್ಕಾರದ ತಲೆಯಮೇಲೆ ಹೇರಲು ಎಂಟು ನೆಪಗಳನ್ನು ಬೇಗ ತಿಳಿಸಿ.

೩. ನಿಮ್ಮ ಮೇಲಧಿಕಾರಿಗಳು ನಿಮ್ಮಮೇಲೆ ಅಸಮಾಧಾನ ಹೊಂದಿದಾರೆ, ಅನ್ನಿ, ಅವರ ಮನವೊಲಿಸಲು ನೀವು ಯಾವ ಯಾವ ಕಾರ್ಯಕ್ರಮ ತೆಗೆದುಕೊಳ್ಳುವಿರಿ? ಯಾವ ಬಾಗಿಲಿಂದ?

೪ ನಿಮ್ಮ ಜೀವನ ಮಟ್ಟವನ್ನು ಉಳಿಸಿಕೊಳ್ಳುವುದಕ್ಕಾಗಿಯೂ ಖರ್ಚಿನ ಮಟ್ಟವನ್ನು ಇಳಿಸಿಕೊಳ್ಳುವುದಕ್ಕಾಗಿಯೂ, ನೀವು ಆಫೀಸಿನೊಳಗಡೆ ಮಾಡಲು ನಿರ್ಧರಿಸುವ ಅನುಕೂಲಗಳನ್ನು ಸೂಚಿಸಿ; ಹೆಚ್ಚು ಆಹಾರ ಬೆಳೆಸಿಕೊಳ್ಳಿ, ಎಂಬ ಚಳುವಳಿಗೂ ಅವಕ್ಕೂ ಏನು ಸಂಬಂಧ?

೫. ನಿಮ್ಮ ಅಧಿಕಾರ ಪ್ರಭಾವದಿಂದ ನೀವು ನಿಮ್ಮ ಮಗಳಿಗಾಗಿ ಅಳಿಯನ ಬೇಟೆಯನ್ನು ಹೇಗೆ ನಡೆಸಬಹುದು, ತಿಳಿಸಿ.

೬. ನಿಮಗೆ ವಹಿಸಲಾಗುವ ಕಾರ್ಯಕ್ಷೇತ್ರವನ್ನು ಕುರಿತು, ಸರ್ಕಾರಕ್ಕೆ ವರದಿಮಾಡುವಾಗ, ನೀವು ಉಪಯೋಗಿಸಬೇಕಾದ ಮೆರುಗು ಮಾತುಗಳು ಯಾವ ಯಾವುವು?

೭. ನೀವು ಮಾಡಿದ ಅಪರಾಧವನ್ನು ನಿಮ್ಮ ಹೆಡ್ಮಾಸ್ತ್ರಿಯ ಮೇಲೆ ಹೊರಿಸಲು ತಂತ್ರಗಳೇನು? ಆತನದೂ ನಿಮ್ಮದೂ ಜಾತಿ ಒಂದೇ ಆಗಿದ್ದರೆ, ಆಗ ಏನು ಮಾಡುವಿರಿ? ಬೇರೆ ಬೇರೆಯದಾಗಿದ್ದರೆ, ಆತನ ವಿಷಯವಾಗಿ ನೀವು ಬರೆಯುವ ರಿಪೋರ್ಟಿನ ಮೊದಲನೆಯ ವಾಕ್ಯ ಹೇಗಿರುತ್ತದೆ?

೮. ನೀವು ಗಳಿಸುವ ಸಂಪತ್ತನ್ನೆಲ್ಲ ಯಾರ ಯಾರ ಹೆಸರಿನಲ್ಲಿ ಎಲ್ಲೆಲ್ಲಿ ಇಡುವಿರಿ? ತಿಂಗಳಿಗೆ ಶೇಕಡ ೧೦೦ ರಷ್ಟು ಬಡ್ಡಿ ಕೊಡುತ್ತೇನೆ ಎಂದು ಒಬ್ಬರು ಆಸೆ ತೋರಿದರೆ ಏನು ಮಾಡುವಿರಿ?

೯. ಸಂಪಾದನೆಯ ದೃಷ್ಟಿಯಿಂದ ಯಾವ ಯಾವ ಇಲಾಖೆ ಉತ್ತಮ? ಮಧ್ಯಮ? ಅಧಮ ಸಂಪಾದನೆ ಎಂಬುದೂ ಉಂಟೆ?

—ಪ್ರಸಾದ್.



ಮದುವೇಲಿ ಉಡುಗೊರೆಗೆ ಕೊಟ್ಟ ಮಕ್ಕಳ ಗಾಡಿ
ಹೀಗಾದರೂ ಪ್ರಯೋಜನಕ್ಕೆ ಬಂತಲ್ಲಾ! ಅಂಕೀವಿ.

ಗೆರೆ

"ಹರನಂತೆ ಹಣೆ ಮೇಲೆ ಬೂದಿಗೆರೆ ನಾಲ್ಕೇಕೆ
ಹರಿಯಂತೆ ಹಣೆ ಮೇಲೆ ರಂಗಿನದು ಮೂರ್ಸಾಕು"
ಎಂದು ವಾದಿಸಿ ಪ್ರಹ್ಲಾದ ಒದೆತಿಂದ, ವಿಷ ಕುಡಿದ
ಚೆಂದವೇ? ಒಂದು ಗೆರೆ ದಾಟಲ್ ತಂದೆ ಕಳಕೊಂಡಾ!

ಆ ಮೇಲೆ ನೋಡು ಆ ಸೀತಾದೇವಿ--ತಮಾಷೆ!
ಒಮ್ಮೆಲೇ ಕಂಡಳು ಶೋಕವನ—ರಕ್ಕಸನ ಹಿಡಿತ
ಕಾರಣವೇನು? ತಿಳಿಯದೇ? ಸೌಮಿತ್ರ ಹಾಕಿದ್ದ--
ಗೆರೆ. ಅದ ದಾಟಿದಳು ತಿಳಿಯದೇ ಮುಗ್ಧೆ—ಯಾರಾದರೇನು?

ಇಂಥದೆಷ್ಟೋ ಪುರಾಣ, ಮೂವತ್ತೇಳು ಪೂರ್ವದಲ್ಲಿ
ಕಂತೇ ಪುರಾಣವೆಂದು ನಗಬೇಡ ತಮ್ಮ....ಲೇಸಲ್ಲ.
ಮೊನ್ನೆನ್ನೇ ಮೆಕಾರ್ಥರೆಂಬೊಬ್ಬ, ದಂಡಿನವ, ಗೊತ್ತುಂಟೋ?
ಮೊನ್ನೆನ್ನೇ ಕಂಡ್ ಕಂಡೂ ದಾಟಿದ ಕಾಣದಾ
ಮೂವತ್ತೆಂಟನೇ ಗೆರೆಯಾ!
ಇನ್ಮೇಲೆ, ತಮ್ಮಾ! ಹಾಕಿದಾ ಗೆರೆಗೇಚೆಗಿರು ತಮ್ಮಾ.

—ಶನಿ.

ಸತ್ಪುರುಷಿ ತತ್ವಗಳು

(ಶ್ರೀ "ಬುಳ್ಳ"ರ ಕ್ಷಮೆ ಬೇಡಿ.)

ಮಂದಮತಿ ನೀನೆಂದು ಮನೆಯಾತ
ನಿಂದಿಸಲು ಮನಕದ ತಂದುಕೊಳ್ಳದವೆ ಮೂರ್ಖೆ!
ಸಂಧಿಸದ ಕಲಹದಲಿ ಸ್ವೈರಣಿಯು
ಹೊಂದದಯೆ ಸೀರೆ ಒಂದ ಗಿಟ್ಟಿಸದಾತೆ ಕಡುಮೂರ್ಖೆ ||

—ಮಾ. ರಾ. ಅ.

ನವನವೀನ !

ಖಾಕೀ ಕಾಗದದ ಚೀಲ; ಮೇಲೆ ಚಿತ್ರವಿಚಿತ್ರವಾಗಿ ಅಕ್ಷರಗಳು—ಹೆಸರು, ಕುಲ, ಪ್ರವರ! ಕೈತುಂಬ ಹೊರೆ—ಮನೆಗೆ ಬರುತ್ತಲೇ ಕೊಡವಿದೆ, ಒಳಗಿದ್ದ ತೆಂಗಿನ ಕಾಯನ್ನ. ರಾತ್ರಿ ಚಟ್ಣಿಯಾದರೂ ಅರೆಯೋಣ, ಆರಾಣೆ ಕಾಯಿರು ವಾಗ ಅದೂ ಅಪರೂಪದ ಭೆಕ್ಷಾಂತ ನಾರು ಹಿರಿಯಲು ಮೊದಲುಮಾಡಿದೆ. ಹಿರಿದೇ, ಹಿರಿದೇ, ಮತ್ತೂ ಹಿರಿದೆ—ಗುಬ್ಬಕ್ಕನ ಕತೇ ಹಾಗೆ. ನಾಲ್ಕು ದಿನ ಇದ್ದಿಲೊಲೆ ಹೊತ್ತಿಡುವಷ್ಟು ಪುಟ್ಟ ಗುಂಜಿನ ಗುಡ್ಡವೇ ಬಿತ್ತು! ಸಣ್ಣ ರಬ್ಬರ್ ಚೆಂಡಿನಂಥಾ ಕಾಯಿ ಒಳಗಿಂದ ಹಣಕಿ ನೋಡಿತು. ಪಾಪ, ಕೊಟ್ಟವರೇನು ಮಾಡಿಯಾರು, ಆ ನಾರಿನ ಹೊರೆಗೇ ದುಡ್ಡಿಟ್ಟಿದಾರೇನ್ನಿ. ಅಂತೂ ಆ ಚೀಲ —ಈ ಕಾಯಿ! ಇದು ಇಂದಿನ ಶೈಲಿ, ನವನವೀನ!

ಹಾಗೇ ಯೋಚಿಸಿದೆ. ಈ ನವನವೀನ ಯಾಕೆ ಬಂತೋ? ಬಾಗಿಲಿಗೆ ಬರಲಿಕ್ಕಿಲ್ಲ, ಮೂತಿಗೆ ಅರಶಿನ ಚಾಚುವರು, ಕುಂಕುಮ ತಳ್ಳುವರು, ಗಂಧ ದವಳು ಕೊರಳು ಕೊಯ್ಯುವವಳಂತೆ ಅಡ್ಡಗಟ್ಟುವಳು, ಹೂವು ಪನ್ನೀರಿನವ ರಂತೂ ಅಭಿನವನಕ್ಷತ್ರಿಕರೇ! ಈ ಪೈಪೋಟಿಯಲ್ಲಿ, ಅರಶಿನ ಹಣೆಗೆ ಹೋಗುತ್ತೆ, ಕುಂಕುಮ ಕೊರಲಿಗೆ, ಗಂಧ ತಲೆಗೆ! ಅಷ್ಟರಲ್ಲಾಗಲೇ ಮೂರು ಮಲ್ಲಿಗೇ ತುಂಡು ಮುಖದೆದುರು ಅಲ್ಲಾಡುತ್ತಿರುತ್ತೆ, ಖಾಕೀ ಚೀಲವಂತೂ, "ಬಂದ ದಾರಿ ಹಿಡಿದು ಹೀಗೇ ಹಿಂದಿರುಗಿದರೂ ಸಂತೋಷವೇ" ಎಂದು ಸನ್ನೆ ಮಾಡು ತ್ತಿರುತ್ತೆ!

ಈ ಧಾಳಿಗಳನ್ನೆಲ್ಲಾ ತಪ್ಪಿಸಿಕೊಂಡಮೇಲಾದರೂ ಬಂದ ಮುತ್ತೈದೇರಿಗೆ ವಧೂವರರ ಕಡೆ ತಿರುಗಲು ಅವಕಾಶವುಂಟೇ! ಜಾಗಕ್ಕೆ ತಡಕಾಟ; ಆರು ಸ್ಪೋನಿನವಳಾಗಲೀ ಹನ್ನೆರಡು ಸ್ಪೋನಿನವಳಾಗಲೀ ಹಾಕಿರುವ ಸುಂದರ್ ಛೇರಿನಲ್ಲೇ ಅಳವಡಿಸಿಕೊಳ್ಳಬೇಕು. ಎಲ್ಲಿ ಭೂಗತವಾಗುತ್ತೇನೋ ಎಂಬ ಭಯ ಬೇರೆ ಪಾಪ ಪೀಡಿಸುತ್ತಲೇ ಇರುತ್ತೆ!

ಹೋಗಲಿ, ಹೇಗೋ ಈಗಲಾದರೂ "ಅದೃಷ್ಟ ಜೋಡೀ" (Lucky pair)ನ ನೋಡೋಣವೆಂದರೆ, ಗಲಡೀ ವರಸೆ ಮಾಡುತ್ತಿರುವ ಸಂಗೀತಗಾರನ

ಕಾಟ. ಅವನ ಹಾಡುಗಾರಿಕೆ ಕೇಳುವವರು ಪಿಟೀಲಿನವನು, ಮೃದಂಗದವನು ಇಬ್ಬರೇ. ಅವನು, ಆರಭೀಲಿ ಅಲಾಪಿಸಿ, ಕಲ್ಯಾಣೀ ಕೀರ್ತನೇಲೀ ಅತ್ತರೂ ಕೇಳುವವರಿಲ್ಲ. ಆದರೇನು ಅವನ ಹುಮ್ಮಸ್ಸೇನಾದರೂ ಕಮ್ಮಿಯಾದೀತೇ! ಎಲ್ಲಿ ಮರೆತೇವೋ ಆ ಗಡಸು ಧ್ವನೀನಾಂತ ಧ್ವನಿ ವ(ಮ)ರ್ಧಕ ಯಂತ್ರಗಳು ಬೀರಿ ಕಿವಿಯಲ್ಲೇ ಕೂಗುತ್ತವೆ! ಅನೇಕ ಸಾರಿ, ಹೆಣ್ಣು ಗಂಡಿನ ದರ್ಶನ ಲಾಭವೇ ಇಲ್ಲದೆ, ಮದ್ದಲೆಯವನ ಜುಟ್ಟಿನ ನೃತ್ಯ ನೋಡೇ ಹಿಂದಿರುಗುವ ಸಂಭವವೂ ಉಂಟು! ಅಂತೂ ಇಂತೂ ಹೋದವರು ಹಣ್ಣಾಗಿ, ಮನೆಗೆ ಬಂದು ಎರಡೆರಡು ಆಸ್ಪ್ರೋ ನುಂಗಬೇಕು!

ಅತ್ತಲಾಗಿ ಆ ಮದುವಣಿಗರ ಪಾಡೊ! ಹಾಯವಾಗಿ ಹಾಕಿರುವ ಸೋಫಾದಲ್ಲಿ ಕೂತಿರಲಿಕ್ಕುಂಟೇ! "ಬಂತೇ ತಾಪತ್ರಯ, ರೇಷನ್ ರಾಮಾಯಣ, ಸಂಬ್ಳಕ್ಕೆ ಲೆಖ್ಖ, ಕೋಳೀಕುಕ್ಕಲು" ಅಂತ ಮನಸ್ಸಿನಲ್ಲಿ ಕುದೀತಿದ್ರೂ, ಬಂದವ್ರಿಗೆಲ್ಲಾ ಹಲ್ಲು ಕಿರಿದು, ಕೈಮುಗಿದು, ಕುಲುಕಿ, ಎದ್ದೂ ಬಗ್ಗಿ, ಕೂತೂ ಎದ್ದೂ ರಾತ್ರಿ ಹೊತ್ತಿಗೆ ರ್ಹ್ಯೂಮೇಟಿಕ್ ಪೇಷೆಂಟುಗಳಾಗಿರುತ್ತಾರೆ!

ಇದಕ್ಕೇ ನಾನು ಹೇಳಿದ್ದು, ಈ ನವನವೀನ ಏನೂ ಸ್ವಾರಸ್ಯವಿಲ್ಲಾಂತ; ಹಿಂದಿನ ಕಾಲದ ಏರ್ಪಾಟೇ ಹಸನೂಂತೀನಿ. "ಅಷ್ಟವರ್ಷಾ ಭವೇತ್ಕನ್ಯಾ" —ಪುಟ್ಟಹುಡುಗಿ. ಚಿಕ್ಕ ಹುಡುಗ ಒಬ್ಬರ ಹುಳುಕು ಮತ್ತೊಬ್ಬರು ಅರೀರು. ಈಗಿನ ಹಾಗೆ, ಇವನ ಕೃತಕದಂತ ಅವಳು ಮೆಚ್ಚಿ ಮದುವೆ ಆಗೋಹಾಗಿಲ್ಲ, ಅವಳ ಚೋರೀ (ಚೌರೀ!) ಜಡೇನ ಇವನು ಮೋಹಿಸಿ ವರಿಸುವಂತಿಲ್ಲ. ಅವನ ನರೆಗೂದಲನಿವಳೆಣಿಸುವಂತಿಲ್ಲ, ಇವಳ ಮುಖದ ಪೌಡರ್ ಪದರಗಳನ್ನ ವನೆಣಿಸುವಂತಿಲ್ಲ!

ಆರತಕ್ಷತೆ ವಿಧಾನವೂ ಅಷ್ಟೆ. ವಿಶಾಲವಾಗಿ ಮಣೆಗಳನ್ನು ಹಾಕಿ ಕೂರಿಸಿದರೆ ದಂಪತಿಗಳು ಹಾಯಾಗಿ ಕೂರುವರು. ಬಂದ ಸುಮಂಗಲಿಯರೂ ಹಾಗೇ; ದಣುವಾರಿಸಿಕೊಂಡು, ತಮ್ಮ ಶರೀರಕ್ಕೆ ಅವಶ್ಯಕವಿದ್ದಷ್ಟು ಸ್ಥಳ ಆಕ್ರಮಿಸಿ, ಉಸಿರಾಡುವರು.

ಸಂಗೀತವೋ, ಸುಕೋಮಲಕಂಠೆಯರ ತರತರಹ ಹಾಡುಗಳು—ಗಾನ ವೈವಿಧ್ಯ! "ಕೇಳಿದ್ದೇ ಕೇಳು ಕರ್ಣಕಠೋರಕಿರ್ಲಿ"ನ ಶಿಕ್ಷೆ ಇಲ್ಲ. ಆ ಹಾಡುಗಳೋ! ನವ ವಿವಾಹಿತರನ್ನ ಕನಸಿನ ರಾಜ್ಯಕ್ಕೇ ಎಳೆದೊಯ್ಯುತ್ತವೆ. ಜೋಡಿಸಿರುವುದು ಮುರುಕು ಮಣೆಗಳೇ ಇರಬಹುದು, ಅದರ ಕಾಲಿನ ಬದಲು ಹೆಂಟಿಯನ್ನೇ ಒರೆಕೊಟ್ಟಿರಬಹುದು, ಮೇಲೆ ಹಾಸಿರುವುದು ಮುತ್ತಾತನ ಮಗುಟಾನೇ ಆಗಿರಬಹುದು, ಮುಂದಿಟ್ಟಿರುವುದು ಜನಮೇಜಯ ಯುಗದ ಎಣ್ಣೇ ಮಣಕು ಕಂಭವೇ ಆಗಿರಬಹುದು, ಆದರೂ—"ಚಿನ್ನಾದ ಹಸೇಮಣೇ, ರನ್ನಾದ ಪಾದಪೂ

ಕೆತ್ತಿಸಿದಾ ಸ್ಥಂಭವೂ, ಧವಳದಾ ಶಾಲೆಯೂ, ಪಚ್ಚೇ ತೋರ್ಣಂಗಳ್" ಅಂತ ಹಾಡುತ್ತಲೇ ಅವರನ್ನ ಗಂಧರ್ವಲೋಕಕ್ಕೇ ಹಾರಿಸುಲ್ವೇ? ಅವರ ಮನಸ್ಸು ಅಪ್ಸರರೊಂದಿಗೇ ವಿಹರಿಸಲ್ವೇ? ಅವಳ ಕಣ್ಣ ನೀರು ಸುರಿದು, ಮಂಜುಗಣ್ಣಾಗಿ ಮಿಂಟೋ ಆಸ್ಪತ್ರೇನೇ ಎದುರು ನೋಡುತ್ತಿರಲಿ, "ಹಸೆಗೇಗಬಾರೇ, ನೀರಜ ನೇತ್ರೀ ನವಮೋಹನಾಂಗೀ" ಅಂದರೆ ಅವನಿಗೆಷ್ಟು ಹಿತ? ಅವನದು ಅಮಾವಾಸ್ಯೇ ಮುಖವಾಗಿದ್ದರೂ "ಬಾರೊ ಹಸೆಗೆ ಭಾಸುರಾಂಗನೇ ಭಾನುಕೋಟಿ ಮನ್ಮಥಾಕಾರನೇ" ಅನ್ನುತ್ತಲೇ ಅವಳಿಗೇನು ಹಿಗ್ಗು ಪಾಪ! ಅದು ಬಿಟ್ಟು, ಈಗಿನ ಹಾಡುಗಾರನಂತೆ, "ಇದಿನ್ಯಾಯಮಾ. ಶ್ರೀರಾಮಚಂದ್ರಾ, ನೀ ಕಿದಿ ನ್ಯಾಯಮಾ" ಅಂತ ಗಂಡೂ ಹೆಣ್ಣಿನ ಮುಖಕ್ಕೇ ಮೂದಲಿಸುವುದು, "ಮನುಜ ಶರೀರವಿದೇನು ಸುಖಾ ಏನು ಸುಖಾ", "ಹರಿಸ್ಮರಣೆ ಮಾಡೋ ಹುಲು ಮನುಜಾ"ಂತ ಎಚ್ಚರಿಕೇ ಕೊಡೋದು ಧರ್ಮವೇ, ರೀತಿಯೇ ಹೇಳಿ!

ಇದೆಲ್ಲಾ ನೋಡಿದರೆ ಯಾಕೋ ಈ ನವನವೀನ........ಉಹು........!

—.—ಟಿ. ಸುನಂದಮ್ಮ.



ಕಟ್ಟಿಸಿದ ಹಲ್ಲು ಸರಿಯಾಗಿ ಕೂತ್ಕೊಳ್ಳೋಕೆ ಈ ಪೈಪು ಬಲು ಚೆನ್ನು.

ಜರ್ಮನ್ ಡಾಕ್ಟರ್

ಓಬೀರಾಯನ ಕಾಲದಲ್ಲಿ, ಅಂದರೆ, ಮೊದಲನೆಯ ಜಗತ್ಸಮರಕ್ಕೆ ಮೊದಲು. ಅವರು ಸಾಗರ ದಾಟಿ, ಜರ್ಮನಿಗೆ ಹೋಗಿ, ವೈದ್ಯ ಕಲಿತು, ಹಿಂದಕ್ಕೆ ಬಂದರಂತೆ—ನಿಜಾಂಶ ಯಾರಿಗೆ ಗೊತ್ತು? ಅಥವ, ಯಾರಿಗೆ ಬೇಕಾಗಿದೆ?

ವೈದ್ಯ ಅಂದ ಮೇಲೆ, ಜನಕ್ಕೆ ಬೇಕಾದ್ದೇನು?.... ಔಷಧಿ, ರುಚಿಯಾದ ಅಗ್ಗವಾದ ಔಷಧಿ. ಸೂಟಿಯಾದ ಸುಲಭವಾದ ಮಾತು. ಇವೆರಡೂ ಇಲ್ಲ ಆತನಲ್ಲಿ. ಬಲು ಜರ್ಮನ್, ಬಲು ಬಿಗಿ.

ಔಷಧಿ ಕೂಡ ಸಾಮಾನ್ಯವಾಗಿ ಬರೆದುಕೊಡೋದಿಲ್ಲ. ವಾಕಿಂಗ್ ಪ್ರಾರಂಭಿಸು, ಬೆಲ್ಲ ತಿನ್ನು, ಸೊಪ್ಪು ಮೇಯಿ, ಮಫ್ಲರ್ ಸುತ್ತಿಕೊ, ನಶ್ಯ ಏರಿಸು, ಕನ್ನಡಕ ಕಿತ್ತುಬಿಸಾಡು, ಕಿವಿ ಮುಡಿಚಿಕೊ, ಇತ್ಯಾದಿ ನಮ್ಮ ವೈದ್ಯ ವನ್ನು ನಮ್ಮ ಕೈಯಿಂದಲೇ ಮಾಡಿಸಿಬಿಡುತ್ತಾರೆ.

ಮೊನ್ನೆ ಬೇರೆ ಯಾರೂ ಸಿಕ್ಕದೆ, ನಾನು ನನ್ನ ಷಡ್ಕ ಮಾಲಿಂಗೂನ ಅವರ ಹತ್ರಕ್ಕೆ ಸಾಗಿಸಿದೆ. ಮಾಲಿಂಗು ಕಂಡರೆ ಎಂಥವರೂ ಹೆದರುವರು; ಅವನು ಅಷ್ಟು ಅಗಲ ಬೆಳೆದುಬಿಟ್ಟಿದ್ದ. ಕುರ್ಚಿಗಳೊಂದೂ ಹಿಡಿಸದಲ್ಲಾ ಅಂತ, ಜರ್ಮನ್ ಡಾಕ್ಟರ್ ತಾವೂ ಎದ್ದು ನಿಂತು, ಅವನನ್ನು ಮಾತಾಡಿಸಿದರು.

ಮಾಲಿಂಗೂಗೆ ತಿಂದ ಅನ್ನ ಅರಗೋಲ್ಲವಂತೆ; ಕೆಟ್ಟ ಕನಸುಗಳಂತೆ, ಮೈ ಕೈ ಭಾರವಂತೆ....ಏನೇನೋ ಹೇಳಿದ. ಜರ್ಮನ್ ಡಾಕ್ಟರು ಅವನ ಕಸಬೇನೆಂದು ವಿಚಾರಿಸಿದರೆ, ಅವನು ತಾಲ್ಲೂಕ್ ಕಚೇರಿ ಕೆಳಗುಮಾಸ್ತ ಅಂತ ನಾನು ತಿಳಿಸಿದೆ. "ಓಹೋ! ದಿನವೂ ಒಂದೇ ಬಗೆಯ ಜೀವನ....ಅನ್ನ ಸಾರು ಊಟ....ಕಾಗದದ ತಿರುವಾಟ....ಕೋ ಆಪರೇಟಿವ್ ಸೊಸೈಟಿ ಕಂತುಗಳ ಸಾಲು ....ಎಂಥವನಿಗೂ ತನುಮನಗಳ ಬೇಸರಿಕೆ" ಎಂದು ಡಾಕ್ಟರು ಗೊಣಗಿದರು.

"ಬೇರೆ ತರದ ಖಾಯಿಲೆಯಾಗಿದ್ದರೆ, ರೆಸ್ಟ್ ತೆಗೆದುಕೊಳ್ಳಿ" ಎಂದು ಹೇಳುತ್ತಿದ್ದೆ. ಆದರೆ, ಈತನಿಗೆ ರೆಸ್ಟೇ ಖಾಯಿಲೆ....ಆದ್ದರಿಂದ, ಈತನಿಗೆ ಹಳ್ಳಿ

ಜೀವನ ತಪ್ಪಿಸಿ, ಗಡಿಬಿಡಿ, ಆತಂಕ, ಭಯ, ತಳಮಳಬರುವ ಹಾಗೆ ಏನಾದರೂ ಮಾಡಿದರೆ, ಉತ್ತಮವಾದೀತು" ಎಂದರು "ಹೋಗಯ್ಯ! ಇವನೊಬ್ಬ ಮಹಾವೈದ್ಯ! ಥತ್" ಎಂದು ಮಾಲಿಂಗು ಕೆಳಕ್ಕಿಳಿದ.

ನನಗರ್ಥವಾಯಿತು. ತಕ್ಷಣ, ಬೆಂಗಳೂರಿಗೆ ವರ್ಗಮಾಡಿಕೊಡಿ ಎಂದು ಅರ್ಜಿ ಬರೆಸಿದೆ, ಸಂಬಂಧಪಟ್ಟವರ ಸಂಬಂಧೀಕರನ್ನು ಕಂಡು, ಕೆಲಸ ನಿರ್ವಹಿಸಿ ಕೊಂಡೆ. ಮಾಲಿಂಗೂಗೆ ಯಾವುದನ್ನೂ ಹೇಳಿಲ್ಲ.

ವರ್ಗ ಅಂದಾಗಲೇ, ಅವನಿಗೆ ಬೆವರೂರುವುದಕ್ಕೆ ಶುರು. ಸಾಮಾನು ಪ್ಯಾಕ್ ಮಾಡಿದಾಗಲೇ ಕೂತು ಎದ್ದು ಹಗ್ಗ ಬಿಗಿದು, ಮೈನೋವು ಹತ್ತಿತು. ನಾಲ್ಕು ಹುಡುಗರನ್ನೂ ಅಕೇನೂ ಬಸ್ ಸ್ಟ್ಯಾಂಡಿಗೆ ಜಟಕಾದಲ್ಲಿ ಸಾಗಿಸು ವಾಗಲೇ ಸಾಕುಸಾಕೆನಿಸಿತು. ಬಸ್‌ನಲ್ಲಿ ಅವತ್ತು ಕೇವಲ ೩೦ ಜನರು ಮಾತ್ರ ಓವರ್ಲೋಡು; ಆದರೂ, ಅದು ಆರು ಕಡೆ ನಿಂತಿತು. ಮಾಲಿಂಗೂನೂ ಮೂರು ಮೈಲಿ ನೂಕಿದ. ಕೊಂಚ ಮೈ ಕರಗಿತು.

ರೈಲಿನಲ್ಲಿ ರಾತ್ರಿಯೆಲ್ಲಾ ಕೂಸನ್ನು ಎತ್ತಿಕೊಂಡು ನಿಂತೇಬಂದ ಬೆಂಗ ಳೂರಿಗೆ. ಪೋರ್ಟರುಗಳೊಂದಿಗೆ ಅರ್ಧಗಂಟೆ ಕೂಗಿದ. ಹೊರಗೆ ಬಂದು, ಪ್ರತಿ ಒಂದು ಪೆಟ್ಟಿಗೇನೂ ತೆರೆದು ಸಾಮಾನೆಲ್ಲ ಹೊರಗೆಳೆದು ರೇಗಿ ಕೂಗಾಡಿ ಗಂಟಲು ಹಾಳುಮಾಡಿಕೊಂಡ. ಜಟಕಾ ಅರಳೇಪೇಟೇಲಿ ಮುಗ್ಗರಿಸಿತು. ಮನೆಗಾಗಿ ಅಲೆದಲೆದು ಕಾಲು ಸವೆಸಿದ. ಕಡೆಗೆ, ಕಚೇರಿಗೆ ಆರು ಮೈಲಿ ದೂರದಲ್ಲಿ ಅರ್ಧ ರೂಮೊಂದು ಸಿಕ್ಕಿತು, ಇಪ್ಪತ್ತೆರಡು ರೂಪಾಯಿ ಬಾಡಿಗೆಗೆ. ರೇಷನ್ ಕೂಪನಿಗಾಗಿ ಎರಡುವಾರ ತಿರುಗಿದ. ತಂದೆ ತಾಯಿಗಳನ್ನು ದೂರಿದ. ದೇವರಿಗೆ ಕೈಮುಗಿದ. ಟ್ಯೂಷನ್ನಿಗಾಗಿ ಹಲ್ಲು ಕಿರಿದ. ಬಸ್ಸಿಗಾಗಿ ನಿಂತು ನಿಂತು ಸೀಟೆಲ್ಲ ಅನ್ನಿಸಿಕೊಂಡ. ಸಕ್ಕರೆ ಬರಿ ಕನಸಾಯಿತು. ಕಾಫಿ ಬಿಟ್ಟ; ಅರೆಹೊಟ್ಟೆ ಅನ್ನ ತಿಂದ, ಕಂಡ ಕಂಡವರೊಡನೆ ಕೆಂಡ ಕಾರಿದ.


ಹುಡುಗರಿಗೊಂದಿಗೆಲ್ಲ ಜಗಳ, ಅವರಿಗೆ ಸ್ಲೇಟು ಪುಸ್ತಕ ಪೆನ್‌ಸಿಲ್ ಪೇಪರು ತೆಗೆದುಕೊಡೋದಿಲ್ಲ ಅಂದ. ಹೆಂಡತಿಗೆ ಸೀರೆ ಉಡಿಸಲು ತ್ರಾಣ ವಿಲ್ಲದೆ, ಅವಳನ್ನ ಅಡಿಗೆ ಮನೆಯಲ್ಲೇ ಕೂಡಿಸದ. ವಿಳ್ಯದೆಲೆ ಬೆಲೆಗೆ ಬೆದರಿ ತಾಂಬೂಲ ವಿಸರ್ಜನೆ ಮಾಡಿದ.

ಈಗ ಅವನ ಅಗಲ ಕೇವಲ ಹನ್ನೆರಡಂಗುಲ; ಅವನ ಕನಸೆಲ್ಲ ಬರೀ ಭಕ್ಷ್ಯ ಭೋಜ್ಯಗಳದು. ಅವುಗಳಿಗೋಸ್ಕರ ಅವನು ಬೇಗ ಬೇಗ ಗೋಣಿರಟ್ಟು ಹಾಸಿ ತೋಳನ್ನೇ ತಲೆದಿಂಬಾಗಿರಿಸಿ ಮಲಗುತ್ತಿದಾನೆ. ಅವನ ಮಕ್ಕಳೆಲ್ಲ

ಜೀವನ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದಿದಾರೆ. ಬರೀ ಮಡಕೆಯಿಂದ ಗಂಡನ ಹಸಿವನ್ನಾರಿಸುವ ಉಪಾಯಗಳನ್ನು ಅವನ ಹೆಂಡತಿ ಕಲಿತು, ಉತ್ತಮ ಗೃಹಿಣಿಯಾಗಿದ್ದಾಳೆ. ಆಕೆ ಕೊಬ್ಬೆಲ್ಲ ಇಳಿದಿದೆ.

ಅಂತೂ, ಜರ್ಮನ್ ವೈದ್ಯರ ಚಿಕಿತ್ಸೆಯಿಂದ ಮಾಲಿಂಗುವಿನ ಹಳೆಯ ಕಾಯಿಲೆ ಎಲ್ಲ ವಾಸಿಯಾಗಿದೆ. ಅವನ ಹೊಸ ಖಾಯಿಲೆಗಳಿಗೆ ಇನ್ನೊಬ್ಬರನ್ನು ನಾನು ಇಷ್ಟರಲ್ಲೇ ಹುಡುಕಬೇಕಾಗಿದೆ.

—ರೇವಣ್ಣ.



ಸೇತುವೆ ಕಟ್ಟೋಕ್ಕೆ ಪರ್ಮಿಟ್ ಕೊಡಿಸ್ತೀನಿ! ದೊರಕಿದ್ದರಲ್ಲಿ
ಶೇಕಡಾ ಏನಾದರೂ ಕೊಟ್ರೆ.

ಹೆಂಗಸರಿಗೆ ಮಾತ್ರ, ಒಂದು ಮಾತು

—

ನಮ್ಮ ಸಂಸ್ಥಾನದಲ್ಲಿಯೂ, ಇಂಗ್ಲೆಂಡಿನಲ್ಲಿರುವಂತೆಯೇ, ಹೆಂಗಸರ ಸಂಖ್ಯೆ, ಶ್ರೀ ಚಾಮುಂಡಾಂಬಿಕೆಯವರ ಪ್ರಸಾದದಿಂದ, ಗಂಡಸರ ಸಂಖ್ಯೆಗಿಂತ ಹೆಚ್ಚು. ನಮ್ಮಲ್ಲಿಯೂ, ಇಂಗ್ಲೆಂಡಿನಲ್ಲಿರುವಂತೆಯೇ, ಆದಿಶಕ್ತಿಯ ಪ್ರಭಾವದಿಂದ ವಯಸ್ಕರೆಲ್ಲರಿಗೂ ಮತದಾನದ ಹಕ್ಕಿದೆ. ಅಂದರೆ, ಈ ಉಭಯ ರಾಷ್ಟ್ರಗಳಲ್ಲೂ, ಪ್ರಜಾಪ್ರತಿನಿಧಿ ಸಭೆಗಳಲ್ಲಿ ಮಹಿಳೆಯರೇ ಎಲ್ಲ ಸ್ಥಾನಗಳನ್ನೂ ಪಡೆಯಬಹುದಾಗಿದೆ.

ಆದರೆ, ಇಂಗ್ಲೀಷ್ ನಾರೀಮಣಿಯರು ಗಂಡಸರಿಗೇ ವೋಟು ಕೊಟ್ಟು ಅವರನ್ನೇ ಪಾರ್ಲಿಮೆಂಟಿಗೆ ಕಳುಹಿಸಿ, ಅವರಿಂದಲೇ ಕಾನೂನುಗಳನ್ನು ರಚಿಸಿ, ಅವರ ಮೂಲಕ ದೇಶ ಹಾಳಾಗುತ್ತಿರುವುದನ್ನೂ ಅಮೇರಿಕದ ಕೈಗೊಂಬೆಯಾಗಿ ಅದು ಕುಣಿಯುತ್ತಿರುವುದನ್ನೂ ನೋಡಿ, ತಮ್ಮ ಪತೀ ಪುತ್ರರನ್ನು ಮೂದಲಿಸಿ ಹಾಸ್ಯಮಾಡುತ್ತಿರುವರು.

ನಮ್ಮ ಸಂಸ್ಥಾನದಲ್ಲಾದರೋ ನಾವು ಹಾಗೆ ಮಾಡುವಂತಿಲ್ಲ. ಗಂಡಸರ ಮೂತಿ ತಿವಿದು, ಅವರಿಂದ ಎಲ್ಲವೂ ಹಾಳಾಗುತ್ತಿವೆ ಎಂದು ಶಪಿಸುತ್ತ ನಾವು ನಾವು ಒಲೆ ಮುಂದೆ ಕೂತರೆ, ನಾವು ನಮ್ಮ ಕರ್ತವ್ಯವನ್ನು ಪಾಲಿಸದಂತಾಗುವುದಿಲ್ಲ. ಹೆಣ್ಣಿನ ಬಾಳು ಕಣ್ಣೀರು ಎಂದು ಗಂಡಸು ಹೇಳುತ್ತಿರುವುದನ್ನೇ ನಂಬಿ ನಾವು—ನಾವು ಮಾತ್ರವಲ್ಲ, ಭಾರತಮಾತೆ ಕೂಡ—ಕೈಕಟ್ಟಿ ಕುಳಿತರಾಗುವುದಿಲ್ಲ. ಗಂಡಸರನ್ನುಳಿಸಿ ನಾವೂ ಉಳಿಯಬೇಕಾದ ಕಾಲ ಸನ್ನಿಹಿತವಾಗಿದೆ.

ಮುಂದಿನ ಚುನಾವಣೆಯಲ್ಲಿ ಗಂಡಸರು ನಮಗೆ ಮೋಸಮಾಡುವ ಪಿತೂರಿ ನಡೆಸುತ್ತಿದಾರೆ. ಅವರ ತಾಯಂದಿರಾದ ನಾವು ಅವರ ಮಂಕುತನಕ್ಕಾಗಿ ಮರುಗಿ, ಅವರಿಗೆ ಬುದ್ಧಿ ಕಲಿಸಿ. ಅವರಿಗೆ ಅನ್ನ ಒದಗಿಸಿ, ಅವರು ಅನ್ಯೋನ್ಯ ಕಚ್ಚಾಡದೆ ಅವರನ್ನು ಪೋಷಿಸಿ, ಅವರು ಹೆಂಡ ಕುಡಿಯದೆ ಅವರ ಬಾಯನ್ನು ಕಟ್ಟಿ, ಆಳಬೇಕಾಗಿದೆ. ಅವರ ನೆಳಲು ನಮಗೀಗ ಸಾಲದಾಗಿದೆ. ಅವರ ಕೈ ಹಿಡಿದರೆ, ಅದು ನಡುಗ ಹತ್ತಿದೆ. ಅವರ ಭಾಷಣಗಳಿಗಿಂತ ಉದ್ದವಾದ


ಸ್ಫೂರ್ತಿದಾಯಕವಾದ ವಾಗ್ವೈಖರಿಯನ್ನುಳ್ಳ ವಾದಗಳನ್ನು ನಾವು ಮಾಡಬಹುದೆಂಬುದು ಎಲ್ಲರಿಗೂ ವೇದ್ಯವಾದ ಸಂಗತಿ.

ಗಂಡುಪಿಳ್ಳೆಗಳನ್ನೆಲ್ಲ “ಬಾಯಿಮುಚ್ಚಿಕೊಂಡು ಕೂತುಕೊ” ಎಂದು ಚಿಕ್ಕಂದಿನಲ್ಲಿ ಬಡಿದು ಕೂರಿಸುತ್ತಿರುವ ನಾವು ಈಗೇಕೆ ಅವಕ್ಕೆ ಹೆದರಬೇಕು. ಗಿಡವಾಗಿದ್ದಾಗ ನಾವು ಬಗ್ಗಿಸಿದೇವೆ; ಆದ್ದರಿಂದ ಅವು ಗಿಡವಾಗಿಯೇ ಇನ್ನೂ ಕೂತಿವೆ. ಮರ ಎಂಬ ಭ್ರಾಂತಿಯಿಂದ ನಾವು ಅವುಗಳ ಸುತ್ತ ಪ್ರದಕ್ಷಿಣೆ ಮಾಡುತ್ತಿದೇವೆ, ಅಷ್ಟೆ.

ಮನೆಯೊಳಗಡೆ ನಮ್ಮದೇ ಕಾನೂನು, ನಮ್ಮದೇ ಭಾಷಣ, ನಮಗೇ ಹೂಮಾಲೆ, ನಾವು ಕೊಟ್ಟದ್ದೇ ತೀರ್ಪು, ನಾವು ಕಟ್ಟಿದ್ದೇ ಬೆಲೆ. ಅಂದಮೇಲೆ, ಹೊರಗಡೆ ರಾಜಕೀಯ ಪ್ರಪಂಚದಲ್ಲಿ, ಕಾನೂನು ಮಾಡುವುದು ನಮ್ಮಿಂದ ಅಸಾಧ್ಯವೆ? ವೇದಿಕೆಯ ಮೇಲಿನ ಹೂಮಾಲೆಗೆ ನಮಗೆ ಅರ್ಹತೆ ಸಾಲದೆ?

ನಾವು ಮಾತ್ರ ಪರಸ್ಪರ ದ್ವೇಷವನ್ನು ತ್ಯಜಿಸಿದರೆ, ನಮ್ಮ ಶಕ್ತಿಯನ್ನರಿತು ಕೆಲಸ ಮಾಡಿದರೆ, ನಾಳಿನ ಭಾರತದ ರಾಜ್ಯಾಂಗ ಸೂತ್ರ, ಮಹಿಳೆಯರ ಕೈಯ್ಯಲ್ಲಿ; ಖಂಡಿತ. ಹಾಗೆ ಮಾಡದೆ ಇದ್ದರೆ, ಬಾಯಿ ಎಂದು ನಮಗೆ ಹೆಸರಿರುವುದು ವ್ಯರ್ಥ.

—ಕೇಸರಿ.



ಹೊಸ ಅಜ್ಜನ ಕಥೆ

ಒಂದಾನೊಂದು ಕಾಡಿನಲ್ಲಿ ಒಂದು ಆನೆ ಇತ್ತು. ಅದು ದಾಹ ಪರಿಹಾರಕ್ಕಾಗಿ ನೀರು ಹುಡುಕುತ್ತಾ, ಸರೋವರದತ್ತ ವೇಗ ವೇಗ ನಡೆದು ಹೋಗುತ್ತಿತ್ತು. ಸೌದೆ ಕಡಿಯುತ್ತಿದ್ದ ಒಬ್ಬ ಅದನ್ನು ಕಂಡು ಹೆದರಿ ಓಡಿದ. ಓಡಿದಾಗ, ಅವನ ಕಾಲಿಗೆ ಉದ್ದ ಮುಳ್ಳು ಚುಚ್ಚಿತು. ಭಯಭರಿತನಾಗಿ ಧಾವಿಸುತ್ತಿದ್ದ ಆ ಬಡಪಾಯಿ ಮುಳ್ಳು ಸಹಿತವಾಗಿಯೇ ಬಹುದೂರ ಓಡಿದ ಅವನು ತನ್ನ ಪಾದದಲ್ಲಿ ಮುಳ್ಳು ಚುಚ್ಚಿಸಿಕೊಂಡು ಅದರ ಸಮೇತ ಓಡದೆ ಇದ್ದಿದ್ದರೆ, ಆ ಮುಳ್ಳು ಆ ಆನೆಯ ಕಾಲಿಗೆ ಚುಚ್ಚುತ್ತಿತ್ತು ಖಂಡಿತವಾಗಿ. ಇದು ಆ ಆನೆಗೆ ತಿಳಿಯಿತೋ, ಏನೊ?

ಬಹಳ ವರ್ಷಗಳ ಅನಂತರ, ಆನೆಯೂ, ಸೌದೆಯವನೂ ಮಹಾ ನಗರವೊಂದನ್ನು ಸೇರಿದರು. ಬೀದಿ ಮಗ್ಗುಲಲ್ಲಿ ಕೂತು ಪಿಳಪಿಳನೆ ಕಣ್ಣು ಬಿಡುತ್ತಿದ್ದ ಬಡಪಾಯಿಯನ್ನು ಕಂಡಾಗ, ಆನೆಗೆ ಹಿಂದಿನ ಬೋಧೆ ಮರಳಿತು. ಅದು ಸೊಂಡಲನ್ನು ನೀಡಿ, ಅವನ ಸೊಂಟದ ಸುತ್ತ ಸುರುಳಿಸಿ, ಅವನನ್ನು ಹಿಡಿದೆತ್ತಿ, ಬೆನ್ನ ಮೇಲೆ ಕೂರಿಸಿಕೊಂಡು, ಮುಂದಕ್ಕೆ ನಡೆಯಿತು.

ಇದನ್ನು ಕಂಡು ಚಕಿತರಾದ ಪುರಜನರು ಜೈಕಾರಮಾಡಿದರು. ಅವನ ಕೊರಳಿಗೆ ಪುಷ್ಪಹಾರವನ್ನೆಸೆದರು. ಅವನನ್ನೇ ಹಿಂಬಾಲಿಸಿದರು. ಅವನ ಮಾತಿಗೆ ತಲೆದೂಗಿದರು. ಅವನು ಹೇಳಿದ್ದಕ್ಕೆ ಅಸ್ತು ಅಂದರು. ಒಡವೆ ವಸ್ತುಗಳನ್ನು ಅವನಿಗರ್ಪಿಸಿದರು. ಅವನೇ ದೇಶಕ್ಕೆ ನಾಯಕನಾದನು.



ಹೊಟ್ಟೆ ಬತ್ತಿದ್ದರೂ ಜುಟ್ಟಿಗೆ ದಂಡೆ ಚೆನ್ನಲ್ಲವೇ!

ಓಟಿಗಾಗಿ

ಎಲ್ಲರು ಮಾಡುವುದು ಪೆಟ್ಟಿಗಾಗಿ, ನಾಳೆ ಓಟಿಗಾಗಿ
ಪಕ್ಷಗಳ ಕಟ್ಟಿಕೊಂಡು ಭಕ್ಷವನ್ನು ತುಂಬಿಕೊಂಡು
ರಕ್ಷಕರಾಗುವುದು, ಪೆಟ್ಟಿಗಾಗಿ. ನಾಳೆ ಓಟಿಗಾಗಿ.

ಸಂನ್ಯಾಸಿ ಖದ್ದರ್ ಜೋಗಿ ದಾಡಿ ಟೋಪಿ ಕಾವ್ರೇಡು—
ಇನ್ನೇನು? ಎಲ್ಲಾನು ಪೆಟ್ಟಿಗಾಗಿ, ನಾಳೆ ಓಟಿಗಾಗಿ

ನಾಳಿಗೆ ಶ್ರೀ ರಾಮರಾಜ್ಯ ಗಾಳೀಗೋಪುರ ಎಂಬೊ
ಗಾಳ ಹಾಕುವುದೆಲ್ಲ ಪೆಟ್ಟಿಗಾಗಿ, ನಮ್ಮ ಓಟಿಗಾಗಿ.


ರೈತ ಕೂಲಿ ಗಳಿಯರೆಂದು ಬಣ್ಣ ಬಾವುಟ ಹಿಡಿದು
ಬೈತ ಭಾಷಣವೆಲ್ಲ ಪೆಟ್ಟಿಗಾಗಿ, ನಾಳೆ ಓಟಿಗಾಗಿ.

ಅನ್ನ ಬಟ್ಟೆ ವಸತಿ ಎಲ್ಲ ಸಂಜೆಯೊಳಗೆ ಧಾರಾಳ
ನಾನು, ತಾನು, ಎಂಬೋದೆಲ್ಲ ಪೆಟ್ಟಿಗಾಗಿ ನಾಳೆ ಓಟಿಗಾಗಿ.

ಭಾರಿ ಭಾರಿ ನಾಯಕರೆಲ್ಲ ರಾಜಿನಾಮೆ ರಾದ್ಧಾಂತ
ಕೇರಿ ಕೇರಿ ತೂರೋದು ಪೆಟ್ಟಿಗಾಗಿ, ನಾಳೆ ಓಟಿಗಾಗಿ.

ಸಂಘ ಸಂಸ್ಥೆ ಜಾತಿ ಪಂಥ ಕೋಮುವಾರು ಇತ್ಯಾದಿ
ಮಂಗನಾಟ ಮಾಡುವುದು ಪೆಟ್ಟಿಗಾಗಿ, ನಾಳೆ ಓಟಿಗಾಗಿ.

—ರುದ್ರಮ್ಮ.



ಚುನಾವಣ ಭಾಷಣಕ್ರಮ

---

(೧)

ಡಿಸೆಂಬರ್ ತಿಂಗಳಿನಲ್ಲಿ ಚುನಾವಣೆ ನಡೆದೇ ನಡೆಯುತ್ತದೆ. ಸತ್ಯಮೇವ ಜಯತೆ. ಆದ್ದರಿಂದ, ಹುರಿಯಾಳುಗಳೆಲ್ಲ ಸ್ವಯಂವರಕ್ಕಾಗಿ ಸಿದ್ಧವಾಗಬೇಕಾಗಿದೆ, ಸಿಂಗಾರಮಾಡಿಕೊಂಡು ಕತ್ತು ಕೊಂಕಿಸಿ ಪದ್ಮಾಸನದಲ್ಲಿ ಕುಳಿತು ಜಯಲಕ್ಷ್ಮಿಯ ಪುಷ್ಪ ಮಾಲಿಕೆಗಾಗಿ ಕಣ್ಣು ಮಿಟುಕಿಸುವ ಕಾಲಸನ್ನಿಹಿತವಾಗಿದೆ.

ಅವಳ ಮನವೊಲಿಸಲು ಭಾಷಣವೇ ಸಂಮೋಹನಾಸ್ತ್ರ. ಆದ್ದರಿಂದ, ಕೊರವಂಜಿಯಲ್ಲಿ ಡಿಸೆಂಬರ್ ಸಂಚಿಕೆವರೆಗೂ ಭಾಷಣ ಕ್ರಮದ ಶಿಕ್ಷಣ ಲೇಖನಗಳನ್ನು ಪ್ರಕಟಿಸಲು ತೀರ್ಮಾನಿಸಿದೇವೆ—ಎಲ್ಲರ ಸಲುವಾಗಿ.

ಸಭೆ ಸೇರಿದೆ, ಅನ್ನೋಣ. ಕಿಕ್ಕಿರಿದಿದೆ, ಅನ್ನೋಣ. ಕಿವಿನೀಡಿದೆ, ಅನ್ನೋಣ. ಅಧ್ಯಕ್ಷರು ತಮ್ಮ ತೊದಲು ಪೂರೈಸಿ, ಕೂತಾಯಿತು ಅನ್ನೋಣ.

ಇದೇ ಸುಮುಹೂರ್ತ. ಭಾಷಣಕಾರ ಎದ್ದುನಿಂತು,....ಗಂಟಲು ಸರಿಪಡಿಸಿಕೊಳ್ಳಬಾರದು. ಕೆನೆದು ಕ್ಯಾಕರಿಸಿ ಕೆಮ್ಮೀರಿ. ಅದು ಅಧೈರ್ಯದ ಚಿಹ್ನೆ, ಕೊರಳಿಗೆ ಉರುಳುಹಾಕಿದರೆ ಮಾಡುವ ಚೇಷ್ಟೆ. ನಾಯಕ ಕಂಠೀರವ ಎಂದೂ ಶ್ಲೇಷ್ಮ ಚೆಲ್ಲುವುದಿಲ್ಲ. ಶ್ವಾಸಕೋಶ ಸರಿಇಲ್ಲದವನು ಹೇಗೆ ಜನರ ವಿಶ್ವಾಸ ಕೋಶವನ್ನು ಸೂರೆಮಾಡಿಯಾನು ?


ಎದ್ದು ನಿಂತು ...ತಾಳಿ ! ಗರುಡ ಗಂಬದಹಾಗೆ ನೆಟ್ಟಿದು ನಿಲ್ಲಕೂಡದು ! ಕೊಂಚ ಬಾಗಬೇಕು. ಬಲಗಡೆಗೋ ಎಡಗಡೆಗೋ ಎಂಬುದು ನಿಮ್ಮ ಪಕ್ಷವನ್ನನುಸರಿಸಿ ನಿಶ್ಚಯಿಸಿ. ಅಂತೂ, ಬಾಗ ಬೇಕು, ಬಗ್ಗಬಾರದು. ಬಾಗಿದವ ಬಾಳಿಯಾನು, ಬಗ್ಗಿದವನಿಗೆ ಬೆನ್ನಮೇಲೆ ಗುದ್ದು ! .. ನೆನಪಿರಲಿ.

ಬಾಗುತ್ತಲೇ, ಮಂದಹಾಸ ಬೀರಬೇಕು. ಇದನ್ನ ಕನ್ನಡಿ ಮುಂದೆ ಅಭ್ಯಾಸಮಾಡಿ, ಯಾವ ರೀತಿಯ ಮುಗುಳುನಗೆ ನಿಮ್ಮ ಮುಖದ ಉದ್ದ

ಅಗಲಗಳಿಗೆ, ನಿಮ್ಮ ಕೆನ್ನೆಯ ದುಂಡು ಡೊಗಲೆಗಳಿಗೆ, ನಿಮ್ಮ ಬಾಯ 'ಕಿಸಿ'ಗೆ ತಕ್ಕಂತೆ ಶೋಭಾಯಮಾನವಾಗಿರಬೇಕಾಗುತ್ತದೆ; ಹಲವರ ಮುಗುಳುನಗೆ ತೆಗಳುನಗೆಯಾಗಿಯೇ ಕಾಣಿಸುತ್ತದೆ. ಕೆಲವರದಂತೂ, ಅತೀ ಭಯಂಕರ. ಅಂಥವರು ತೆಪ್ಪಗೆ ತಮ್ಮ ಸಪ್ಪೆ ಮುಖವನ್ನೇ ಸಭೆ ಎದುರು ಹಿಡಿಯಲಿ. ಮೀಸೆ ಹೊತ್ತ ಮಹನೀಯರು, ಮಹಿಳೆಯರೂ ಇರುವ ಸಭೆಯ ಮುಂದೆ, ಅದರ ತಂಟಿಗ ಹೊಗಲೇ ಬಾರದು. ಬರೀ ಗಂಡು ಗಂಡಸರೇ ತುಂಬಿರುವ ಸಭೆಯಲ್ಲೂ, ಮೀಸೆಗೆ ಕೈಹಾಕಬಾರದು. ಆಗಾಗ, ನಂಜಿಕೊಳ್ಳಬಹುದು, ಅಷ್ಟೇ, ಅದರ ಎಡ ತುದಿಯನ್ನ.

ಇನ್ನು ಮಾತು ಪ್ರಾರಂಭ ನೆಲ ಸವಡಿಸಿದೆ. ಕಾರ್ಮೋಡವಿದೆ; ಗಾಳಿ ಎದ್ದಿದೆ; ಧೂಳು ತುಂಬಿದೆ; ನಾಲಗೆಗೆ ನವೆಹತ್ತಿದೆ; ಕಿವಿಗೆ ಕಾತುರತೆ ಕೂಡಿದೆ ಇನ್ನು ಮಾತಿನ ಸುರಿಮಳೆ.

—ಸಶೇಷ.



ಈ ಮನೇಲಿ ಸ್ವಿಚ್ ಎಲ್ಲಿದ ಅಂತ್ರಿ ?

ಕಟುಕ

“ಹೇಗಿದೆ ಊರಲ್ಲೆಲ್ಲ, ಮಳೆ, ಬೆಳೆ?” ಎಂದು ನಾನು ಆ ಗೌಡನನ್ನು ಕೇಳಿದೆ, ಸುಮ್ಮನೆ, ಮಾತು ಪ್ರಾರಂಭಿಸುವುದಕ್ಕೆ, ರಾಮನಹಳ್ಳಿಗೆ ದಾರಿ ತೋರಿಸಿದನಲ್ಲಾ, ಎಂಬ ಪ್ರೀತಿಗೆ ಪ್ರತಿಫಲವಾಗಿ. “ಹಾಳಾಗಿ ಹೋಗಿದೆ, ದೇವರು! ಮಳೆ ಹೇಗೆ ಬರುತ್ತೆ? ಬೆಳೆ ಹೇಗೆ ಬರುತ್ತೆ, ಇಂಥ ಕಟುಕರಿರೋವಾಗ ಊರಲ್ಲಿ” ಎಂದು ಅವನು ಉತ್ತರ ಕೊಟ್ಟಾಗ ನಾನು ಚಕಿತನಾದೆ. “ಅದ್ಯಾರಯ್ಯಾ ಹಾಗೆ?” ಎಂದು ನಾನು ಕೇಳಲೇ ಬೇಕಾಗಿತ್ತು.

“ಇವೆಲ್ಲ ಈ ಮನುಷ್ಯ ಸುಮ್ಮನಿರಲಾರದೆ ಯಾವು ಯಾವುದೊ ಯಂತ್ರ ತಂತ್ರ ಮಾಡುವುದಕ್ಕೆ ಹೋಗಿದ್ದರಿಂದ ಆಗಿರೋ ಅನಾಹುತ, ದೇವರು! ಕಾಲು ಮೇಲೆ ಕಾಲು ಹಾಕ್ಕೊಂಡು ನಡೆಯೋದು ಬಿಟ್ಟು ಬೈಸಿಕಲ್ಲು ಹತ್ತಿದ; ರಾಗಿ ರೂಪಾಯಿಗೆ ಆರು ಸೇರಾಯ್ತು. ಗುಂಪು ಕಟ್ಟಿಕೊಂಡು ಬಸ್ ಹತ್ತಿದ; ನಾಲ್ಕುಸೇರಾಯ್ತು. ಆಂಜನೇಯ ಸೂರ್ಯನ ಕಡೆ ಹಾರಿ ಕೆನ್ನೆಗೆ ಹೊಡಿಸಿಕೊಂಡಹಾಗೆ, ಇಮಾನ ಹತ್ತಿ ಅಂತರಿಕ್ಷ ಭೇದಿಸಿದ, ಎರಡು ಸೇರಿಗಿಳಿಯಿತು. ಕಬ್ಬಿಣದ ಗಾಡಿಗಳು ಬಂದುವು ಕಬ್ಬಿಣದ ಎಂಜಿನ್ ಹಿಂದೆ....ಮನುಷ್ಯನ ಎದೇನೇ ಕಬ್ಬಿಣ ಆಗ್ಹೋಯ್ತು, ದೇವರು ....

ನೋಡಿ, ದೇವರು! ರಾಮನಹಳ್ಳಿ ತಿಮ್ಮಣ್ಣನವರು, ನೀವು ನೋಡೋಕೆ ಹೋಗ್ತಿರೋರ ತಂದೆ. ಎಂಥ ಬೆಣ್ಣೆ ಅಂತೀರಿ, ಅವರ ಹೃದಯ...ಅವರು ಅತ್ಲಾಗೆ ಹೊರಟು ಹೋದರು....ಮಗ ಬಂದ ಅವರ ಜಾಗಕ್ಕೆ....ಕಲ್ಲಿನಂಥ ಹೃದಯ ಕಟುಕ, ದೇವರು. ಅಲ್ಲಿಂದೀಚೆಗೆ ಕಂಟ್ರೋಲು ಬಂತು .. ಮಳೆಯೇ ಇಲ್ಲ....ಬೆಳೇನೂ ಆರಾಣೆ ಎಂಟಾಣೆ....ಹತ್ತಾಣೆಗೆ ಹತ್ತಲೇ ಇಲ್ಲ, ದೇವರು”

ತಿಮ್ಮಣ್ಣನವರ ಮಗ ನನ್ನ ಸೋದರಳಿಯನ ಮಾವ.

“ಯಾಕಪ್ಪ, ಕಟುಕ ಅಂತ ಹೇಗೆ ಹೇಳ್ತಿಯಾ” ಎಂದೆ.” ಖೂನಿ ದರೋಡೆ ಮಾಡಿಸಿದರೇನು, ಅವರು” ಎಂದು ಕೇಳಿದೆ.

“ಖೂನೀನೂ ಮಾಡಿಸ್ತಾರೆ, ದೇವರು, ದೊಡ್ಡೋರು! ಆಗಾಗ, ಹೆಣ್ಣಿನ ವಿಷಯ ಹೆಚ್ಚಿಹೋದಾಗ . ಜಿದ್ದು ಬಿದ್ದಾಗ .. ದರೋಡೇನೂ ಒಪ್ಪಬಹುದು,

ದೊಡ್ಡೋರು ಮಾಡಿದರೆ....ಗಂಟು ಹೊಡೆಯುವುದೇ ಅವರ ಚಾಳಿ....ಚಟ.... ಆಳು ಕಾಳು ಭರ್ತಿ ಇರೋವಾಗ ಏಕಾದರೂ ಒಂದು ಲೂಟಿ ಗೀಟಿ ಮಾಡೋಣ ಅನ್ನಿಸ್ತದೆ, ಮಸ್ತಿ ಬಂದಾಗ, ತಿಂದು ತೇಗಿದ ಅಮಲಿನಲ್ಲಿ...ಆದರೆ, ದೇವರು ಹಸುಗೂಸಿಗೆ ಹಾಲುಕೊಡದೆ ಸಾಯಿಸುವುದು, ಯಾವ ನ್ಯಾಯ, ದೇವರು ? ಕಟುಕ ಅಲ್ಲದೆ ಮತ್ತೇನು, ದೇವರು, ಅಂಥವನು ?"

"ಏನೇನು ? ಹಸುಗೂಸಿಗೆ ಹಾಲುಕೊಡದೆ........"

"ಆದರ ಪ್ರಾಣ ಹಿಂಡಿದ, ದೇವರು ! ಮಕ್ಕಳು ಹೆತ್ತವನು ಹೀಗೆ ಮಾಡ ಬಹುದೆ, ನೀವೇ ಹೇಳಿ"


"ಎಲ್ಲೊ ಸುಮ್ಮನೆ ಯಾರೋ ಆಗದವರು ಕಥೆ ಹುಟ್ಟಿಸಿರಬೇಕು, ಗೌಡ"

"ಇಲ್ಲ ದೇವರು ! ನನಗೆ ಚೆನ್ನಾಗಿ ಗೊತ್ತಿದೆ. ಸುಳ್ಳು ಹೇಳುವವನಲ್ಲ, ನಾನು. ನಾನು ಹುಟ್ಟಿದಾಗ, ನನ್ನ ತಾಯೀನ ತಿಂದು ಬಿಟ್ಟ. ನನ್ನ ದೊಡ್ಡಮ್ಮ ಈ ನಿಮ್ಮ ರಾಮನಹಳ್ಳಿ ತಿಮ್ಮಣ್ಣನವರ ಹತ್ತಿರ ಹೋಗಿ ಅತ್ತು ಕರೆದು ಅಡ್ಡಬಿದ್ದಳು. ದಿನವೂ ಒಂದು ಪಾವು ಹಸುವಿನ ಹಾಲು ಹಸುಗೂಸಿಗೆ ಕೊಡುವಂತೆ ನನ್ನ ಹೆಸರಿಗೆ ತಿಮ್ಮಣ್ಣನವರು ಚೀಟಿ ಬರೆದುಕೊಟ್ಟರು. ಹನ್ನೆರಡು ವರ್ಷ ಕೊಟ್ಟರು. ದೇವರು, ಆ ಚೀಟಿ ಬಲದಮೇಲೆ....ನಂತರ, ಅವರು ಕೈಲಾಸ ಸೇರುತ್ತಲೂ, ಅವರ ಮಗಾನೂ ಹತ್ತು ವರ್ಷ ಕೊಟ್ಟ ದೇವರು....ಆದರೆ, ಇದ್ದಕ್ಕಿದ್ದಹಾಗೆ, ಒಂದು ದಿವಸ ನಿಲ್ಲಿಸೇಬಿಟ್ಟ, ಕಟುಕ. ನನ್ನ ಕೂಸಿಗೀಗ ಹಸುವಿನ ಹಾಲೇ ಇಲ್ಲ, ದೇವರು" ಅಂದ.

—ಶಂಭು.

——o——

ಬಾಯಿ ಬಿಟ್ಟರೆ—



ಜರ್ಮನ ಅಮೇರಿಕನ್ ಫ್ರಾನ್ಸಿನವ ರಷ್ಯಾದವ ಇಂಗ್ಲೀಷಿನವ ಕನ್ನಡಿಗ

ಭಾನುವಾರದ ಬಿಡುವು

—

ಅವತ್ತು ಆದಿತ್ಯವಾರ ಎಂದಿನಂತೆ ಆರಾಮವಾಗಿ ಮುಂಜಾನೆ ಎದ್ದು ಕಟ್ಟೆಗೆಗೆ ಕ್ಯೂ ನಿಂತು ಹಾಯಾಗಿ ಊಟದ ಹೊತ್ತಿಗೆ ಮನೆ ಸೇರುವ ಬದಲು ಕೊಂಚ ಕಷ್ಟವಾದರೂ ಹದಗೆಟ್ಟ ಮನೆಯ ಸ್ವರೂಪ ಬದಲಾಯಿಸುವುದೆಂದು ನಿರ್ಧರಿಸದೆ. ಗೂಡು ಮಾಡಗಳ ಪರಿಶೋಧನೆಯಿಂದ ಪ್ರಾರಂಭವಾಯ್ತು ಕೆಲಸ. ಒಂದೊಂದಾಗಿ ಹೊರಬಿದ್ದವು........ಹಳೆ ಸೀಸೆ—ಮುರಿದ ಬಾಚಣಿಗೆ, ಖಾಲಿ ಪೌಡರ್ ಡಬ್ಬ, ತೂತುಬಿದ್ದ ಮಣೆಯ ಹಳೇ ಚೀಲ—ಒಡೆದ ಬಳೆಗಳ ರಾಶಿ—ಅರ್ಧ ಹಚ್ಚಿಕೊಂಡ ಮುಲಾಮಿನ ಡಬ್ಬಿ—ಕೈ ಕಾಲು ಮುರಿದು ಕೊಂಡು ತಲೆ ಒಡೆದು ಕೊಂಡು ಮೂಲೆ ಗುಂಪಾದ ನಮ್ಮ ಪಾಪಚ್ಚಿಯ ಮೆಚ್ಚಿನ ಗೊಂಬೆ. ಮೂರು ಮುರಿದ ಸೀಮೆಸುಣ್ಣದ ತುಕುಡ—ಆರು ಕವಡೆ—ಒಂದು ಶಂಖ ನಾಲ್ಕೂಮುಕ್ಕಾಲು ಕಪ್ಪೆ ಚಿಪ್ಪು—ತಳ ಹತ್ತಿದ ಕಾಡಿಗೆ ಡಬ್ಬಿ—ಹೇರ್‌ಪಿನ್ನೂ, ಜಖ್ಖಂ ಆದ ಪ್ಲಾಸ್ಟಿಕ್ ಡಬ್ಬಿಗಳು. ಬೂಸರು ಬಂದ ಮತಾಪಿನ ಡಬ್ಬಿ—ಖಾಲಿ ಬೆಂಕಿಪಟ್ಣ—ಜಜ್ಜಿ ಅಪ್ಪಚ್ಚಿಯಾದ ರಾಗಮಾಲಿಕೆ—ಪೀಪಿ—ತೆಳುವಾದ ಸೋಪು, ವಡೆದ ಕನ್ನಡಿ—ಅಪಾಯಕ್ಕೀಡಾಗಿ ಹುಳು ಹೊಕ್ಕು ಮನೆ ಮಾಡಿಕೊಂಡ ಗಡಿಯಾರ. ಒಂದನೆ ಪುಸ್ತಕದ ಮೊದಲನೆ ಎಂಟು ಹಾಳೆಗಳು, ಎಣ್ಣೆಕುಡಿದು ಕಂದು ಬಣ್ಣಕ್ಕೆ ತಿರುಗಿದ ಗ್ರಾಮೋಫೋನ್ ಕೀರ್ತನೆಗಳ ಪುಸ್ತಕ. ಗಿಲಗಂಚಿ—ಗೋಲಿ—ಚಿನ್ನಿಕೋಲು—ಅರ್ಧ ಚಾವಟೆ ಮುಕ್ಕಾಲು ಬುಗುರಿ. ಹಜಾರೆ-ಮಂಕಡ್-ಓರೆಲ್-ಹ್ಯಾಮಂಡ್ ಇತ್ಯಾದಿಗಳ ಫೋಟೋ ನ್ಯೂಸ್ ಪೇಪರಿನಿಂದ ಕತ್ತರಿಸಿ ಸುರುಳಿ ಸುತ್ತಿ ಕೊಬರಿ ಎಣ್ಣೆ ಸೀಸೆ ಹಿಂದೆ ಇಟ್ಟಿತ್ತು. ಆ ಸೀಸೆ ಅವಕ್ಕೆ ಎಣ್ಣೆ ಕುಡಿಸಿತ್ತು.

ಈ ಸಮಸ್ತ ಆಸ್ತಿಯನ್ನು ಒಂದೊಂದಾಗಿ ಕಿತ್ತು ರೂಮಿನ ತುಂಬಾ ಹರಡುತ್ತಿದ್ದೆ. ಆಗಲೇ ಬಂದದ್ದು ಮೀನಾಕ್ಷಿ ಒಳಗಿನಿಂದ........ಬಿಸಿ ಬಿಸಿ ಈರುಳ್ಳಿ ಉಪ್ಪಿಟ್ಟಿನ ತಟ್ಟೆ ಒಂದು ಲೋಟ ಕಾಫಿ ಹಿಡಿದು.

"ಲೇ! ಈಗ ನನ್ನ ನೀನು ಸತಾಯಿಸಬೇಡ....ಮೊದಲು ಈ ಮನೆ ಒಂದು ತಹಬಂದಿಗೆ ತಂದು ಆಮೇಲೆ ತಿಂಡಿ ತೀರ್ಥ ತಿಳಿತೆ....ಮನೇಲಿ ಹೆಂಗಸರೂಂತ

ಇರೋರು ಇದನ್ನೆಲ್ಲಾ ನೋಡ್ಕೊಬೇಕು—ಇರೋ ಥಾನುವಾರವನ್ನೆಲ್ಲಾ ಈ ಕಸ ತೆಗೆಯೋದರಲ್ಲೇ ಮುಗಿಸಿದರೆ ಹೇಗೆ?... ಹಾಳು ಹೆಂಗಸರು ಸೋಮಾರಿಗಳು...ಎರಡು ಹೊತ್ತು ಬೆಯಿಸಿ ಹಾಕಿದರೆ ತಾವು ಕೈಹಿಡಿದದ್ದಕ್ಕೆ ಸಾರ್ಥಕವಾಯ್ತೂಂತ ತಿಳಿದುಕೊಂಡುಬಿಟ್ಟಿದ್ದೀರಿ ನೀವು—ಅಂ. " ಎಂದು ಗೊಣಗುತ್ತಲೇ ಕಿತ್ತಿ ಎಸೆಯತೊಡಗಿದೆ. "ದಿ ಗರ್ಲ್ ರನಿಂಗ್" "ಭಯಂಕರ ಕೊಲೆ" "ಮುತ್ತುಗದ ಹೂ" "ಬಾಸಿಗ" ಕೊಳೆಯಾದ ಬಿಳಿ ದಾರದ ಉಂಡೆ....ಆ ಆ ಉಂಡೆ ಎಸೆಯುವಾಗಲೇ ನನ್ನ ಪಿತ್ತ ನೆತ್ತಿಗೇರಿದ್ದು, ಹಾಳು ಮೂಳು ಏನು ಸಾಮಾನಿವು ಎಂದು ರಭಸದಿಂದ ಆ ಹೊಲಿಯುವ ದಾರದ ಉಂಡೆಗೆ ಕೈ ಹಾಕುತ್ತಲೇ ಅದರ ಜೊತೆಗೆ ಸಿಕ್ಕಿಕೊಂಡ ಸೂಜಿ ನನ್ನ ಹೆಬ್ಬೆಟ್ಟಿಗೆ ಹೊಕ್ಕಿತು. "ಅರರರೆ....ಥೂ.. ಹಾಳು ಸೂಜಿ ಯಾಕೆ ಈ ದಾರದುಂಡೆಗೆ ಸಿಗಿಸಬೇಕು. ಮೀನೂ....ಬೇಗ ಈ ಸೂಜಿ ಕಿತ್ತು...." ಎಂದು ಬೆರಳು ಮುಂದೆ ಮಾಡಿದಾಗ—ಅವಳ ಎರಡೂ ಕೈ ಬಿಡುವಿಲ್ಲವೆಂದು ಉಪ್ಪಿಟ್ಟಿನ ತಟ್ಟೆ ಕಾಫಿ ಲೋಟ ಮುಂದೆ ಹಿಡಿದಳು. "ಥೂ ನಿನ್ನ" ಎಂದು ಹೊಕ್ಕ ಸೂಜಿ ಕಿತ್ತೊಗೆದು ಬೆರಳು ಬಾಯಿಗಿಟ್ಟು ಗೋಡೆಗೆ ಆತು ಕೂತೆ. ಮುಂದೆ ಬಂದು ಕೂತಿತ್ತು ಉಪ್ಪಿಟ್ಟಿನ ತಟ್ಟೆ ಕಾಫಿ ಲೋಟ.

ಎರಡು ಒಬ್ಬೆ ಹೊಟ್ಟೆಗೆ ಬಿದ್ದು—ಮೂರು ಲೋಟ ನೀರು ಒಂದು ಲೋಟ ಕಾಫಿ ಇಳಿದಮೇಲೆ ಕೊಂಚ ಸ್ತಿಮಿತಕ್ಕೆ ಬಂತು ಪರಿಸ್ಥಿತಿ. ಈ ಮಧ್ಯೆ ನನ್ನೆರಡು ಕುನ್ನಿಗಳೂ ನಾನೆಸೆದ ಸಾಮಾನಿನ ಸಮುದ್ರದಲ್ಲಿ ಈಜಿ ಎರಚಿ ದಿಕ್ಪಾಪಾಲಾಗಿ ಮಾಡಿ ರೂಮು ಅಲ್ಲೋಲ ಕಲ್ಲೋಲ ಮಾಡತೊಡಗಿದ್ದವು. ಬೈಯ್ಯಲೆ ಮೀನಾಕ್ಷಿ ಬಿಡಳು—ಹೊಡೆಯಲೆ! ಕೈ ಬಾರದು—"ಏ—ಯಾವೋನೋ ಅವನು ದಾಂಥಲೆ ಹಾಕೋನೂ...ಹೋಗ್ತೀರೋ ಇಲ್ರೋ ಹೊರಗೆ" ಎಂದು ಮಾತ್ರ ಗದುರಿದೆ. ಚಿಕ್ಕಾವ ಪಿಲ್ಟು "ಹ್ಹಿಹ್ಹಿ" ಎಂದು ಅಣಗಿಸಿ ಹೆಗಲಮೇಲೇರಿ ಬಂದ. ಹಿರಿಯವ ಕೊಂಚ ಹೆದರಿ ಮೂಲೆ ಸೇರಿದ. ಆ ಸಾಮಾನಿನ ರಾಶಿ ಕಂಡು ಮರುಗಿ ಮೀನಾಕ್ಷಿಗೆ "ಲೇ! ಇದೇನೆ ನಿನ್ನ ಆಸ್ತಿ—ಪಾತ್ರೆಯಲ್ಲ ಪಡಗವಲ್ಲ—ಕೂಳಲ್ಲ ಬಾಳಕವಲ್ಲ.....ತಿಂದಹಾಗಲ್ಲ ಉಂಡಹಾಗಲ್ಲ...ಈ ಹಾಳು ಸಾಮಾನು ಕಂಡರೆ ಯಾವ ದೇವರಿಗೆ ಪ್ರೀತಿ... ಇದೆಲ್ಲಾ ನಾನು ಇವತ್ತು ಕಸದಬುಟ್ಟಿ ಕಾಣಿಸುವವ" ಎಂದು ಹೇಳಿದೆ. ಆ ಪ್ರಾಣಿ ಏನೂ ಮನಸ್ಸಿಗೇ ತಂದುಕೊಂಡ ಹಾಗೆ ಕಾಣಲಿಲ್ಲ. ಮೂತಿ ಸೊಟ್ಟಮಾಡಿ ತಿಂದ ತಟ್ಟೆ. ಕುಡಿದ ಕಾಫಿ ಲೋಟ ಹಿಡಿದು ಭಿರಿಭಿರಿ ಹೊರ ಹೊರಟೇ ಹೋದಳು. ಅವಳ ಮೇಲೇನೂ ಜೋರುಮಾಡದ ಧೀರ ನಾನು. ನನ್ನ ಜೋರತ್ವಕ್ಕೆ ಜ್ವರ ತಗುಲಿ ಎಂದೋ ಸತ್ತುಹೋಗಿತ್ತು. ಆದರೂ ಪತಿ ಸಹಜ

ವಾದ ನಡೆಯುದ ಜೋರು ಮಾಡಲೇಬೇಕಷ್ಟೆ? ಹಿರಿಯುವ ಮೂಲೆ ಹಿಡಿದು ಕುಳಿತದ್ದರ ಅರ್ಥ ಅವನ ಮೂತಿ ನೋಡಿದ ಮೇಲೆ ತಿಳಿದದ್ದು. ಹನುಮಪ್ಪನ ಮುಸುಡಿ ಮಾಡಿ ಕೂತಿದ್ದ ಅವ. "ಏನೊ ಅದು ನಿನ್ನ ಗೋಳು" ಎಂದಾಗ ಬಿಕ್ಕಿ ಕಣ್ಣೀರಿಕ್ಕಿದ. ತುಟಿ ಹಾಯಿಸಿದ, ತಲೆ ತಗ್ಗಿಸಿ ನೆಲ ಕೆರೆಯುತೊಡಗಿದ "ಏನದು ಬೊಗಳಬಾರದೆ?" ಎಂದು ಗದರಿದಾಗ ಬಾಯಿಬಿಟ್ಟ ಆ ಪುಣ್ಯ ಪುಣ್ಯ ಪುತ್ರ. "ನಂಗೆ ನನ್ನ ಸಾಮಾನು ಹಾಕೊಳ್ಳೊಕೆ ಟ್ರಂಕೇ ಇಲ್ಲ" ಎಂದು ಬಿಕ್ಕಿದ. "ಅಯ್ಯೊ ಮಗುವೆ! ಒಂದು ಟ್ರಂಕಿಗೆ ಯಾಕೊ ನೀನು ಇಷ್ಟು ವ್ಯಥೆ ಪಡಬೇಕು...." ಎಂದು ಬೋಳೈಸಿದೆ. ಅವರಪ್ಪ ಮಾಡಿಟ್ಟ ಆಸ್ತಿಗೆ ಟ್ರಂಕು ಬೇರೆ ದಂಡ—ಆದರೂ ಈ ಮುರುಕು ಪೆನ್ಸಿಲ್, ಹರಕು ಪೇಪರಿಗೆ ಟ್ರಂಕು ಬೇಡವೆ ಪಾಪ ಹಳೆಯ ಟ್ರಂಕೆರಡು ಬಚ್ಚಲ ಮನೆ ಅಟ್ಟದಲ್ಲಿ ಬಿದ್ದಿದ್ದವು. ಅದನ್ನು ಸರಿಮಾಡಿಸಿ ಕೊಟ್ಟರೆ ಈ ಹಾಳೂಮೂಳು ಸಾಮಾನುಗಳು ಗೂಡು ಮಾಡ ಸೇರದೆ ಅವರವರ ಪೆಟ್ಟಿಗೆಯಲ್ಲಿ ಇರುತ್ತದೆ. ಎಲ್ಲರಿಗೂ ಸರಿಯಾಗಿ ಎಚ್ಚರಿಕೆ ಕೊಟ್ಟು ಅವರವರ ಸಾಮಾನು ಅವರವರ ಪೆಟ್ಟಿಗೇಲೆ ಇಟ್ಕೊಬೇಕು ಆಗ ಮನೆ ಚೊಕ್ಕಟವಾಗಿರುತ್ತೆ— ಕಸಕ್ಕೆ ಅವಕಾಶವಿರೊಲ್ಲ ಎಣ್ಣೆ ಸೀಗೆಪುಡಿ ಒಂದೇ ಗೂಡಿಗೆ ಬರೋಲ್ಲ—ಎಂದು "ಆಗಲಿ ಮಗು....ಯಾರಾದರೂ ಟ್ರಂಕ್ ರಿಪೇರಿಯುವರು ಬಂದರೆ ಕರಿ ..." ಎಂದ ಕೂಡಲೆ ಆ ಮಗು ನೆಗೆದು ನಡೆಯಿತು ಟ್ರಂಕ್ ರಿಪೇರಿಯುವನನ್ನ ಹುಡುಕೂಕೆ.

"ಎಲ್ಲಾ ಒಂದು ಕಡೆ ಇತ್ತು ಗೂಡಲ್ಲಿ—ಈಗ ಮನೆಗೊಂದು ಬಿಸಾಕಿ ಮನೆಯೆಲ್ಲಾ ಅವಾಂತರವೇ ಆಗಿಹೋಯ್ತು ನೀವು ಮಾಡಿದ ಕೆಲಸ" ಎಂದು ಮೈಮೇಲೇ ಬಂದಳು ಮೀನಾಕ್ಷಿ. "ಈ ಗಂಡಸರ ಕೆಲಸವೇ ಹೀಗೆ—ಹುಮ್ಮ ಸ್ಸಿಲ್ಲ. ಆಗದ ಕೆಲಸ ಮಾಡೋಕ್ಹೋಗೋದು, ಅರ್ಧಕ್ಕೆ ಬಿಟ್ಟು ಅರ್ಧಾಂಗಿ ಮೇಲೆ ರೇಗಿಬೀಳೋದು" ಎಂದೂ ಹೇಳಿದಳು. ನಾನು ಮಾತೇ ಆಡದೆ ನೀರು ಮನೆ ಅಟ್ಟಕ್ಕೆ ಏಣಿ ಹಾಕಿದೆ ಆ ತಗಡು ಟ್ರಂಕೆರಡನ್ನೂ ತೆಗೆಯಲು. ಈ ಅಟ್ಟ ವನ್ನೂ ಯಾಕೆ ಸ್ವಚ್ಛ ಮಾಡಬಾರದು!! ಎಂದು ಕೆಳಕ್ಕೆ ಎಸೆದೆ—ಹರುಕಲು ತೊಟ್ಟಲು, ಹಳೆ ಹಗ್ಗ—ಸವೆದ ಜೋಡು ತುಂಬಿದ ಬುಟ್ಟಿ, ಜೇಡು ಕಟ್ಟಿದ ಕಾಡುಜಿಂಕೆಯ ಕೋಡು—ರೋಮ ಉದುರಿದ ಕೃಷ್ಣಾಜಿನದ ಸುರುಳಿ... ಹಳೇ ಕಾಲದ ಚರಕ, ಹಳೇ ಸೈಕಲ್ ಟೈರು—ನಾನು ಹುಡುಗನಿದ್ದಾಗ ತಂದ ಮೂರು ಗಾಲಿ ಸೈಕಲ್ಲು ಇನ್ನೇನು ಇಳಿಸುತ್ತಿದ್ದೆ....ಅಷ್ಟರಲ್ಲೇ ಅಬ್ಬರಿಸಿದಳು ಮೀನಾಕ್ಷಿ. "....ಆ ರೂಮು ನೀಟುಮಾಡಿಯಾಯ್ತು ಇನ್ನು ಈ ಅಟ್ಟ ಹತ್ತಿದಿರಾ! ಇಳೀರಿಂದ್ರೆ ...ಸಾಕು ನಿಮ್ಮ ಅಟ್ಟಹಾಸ....ಇರೋದಿರೋಹಾಗೇ ಇರ್ಲಿ....ಸಧ್ಯ ನನ್ನ ಪ್ರಾಣ ತೆಗೀಬೇಡಿ ಇದನ್ನೆಲ್ಲಾ ಮನೆತುಂಬ ಹರಡಿ"


ಎಂದು. ತಲೆ ಕೆರೆದುಕೊಂಡು ಮೈಮೇಲಿನ ಧೂಳು ಹೊಡೆದುಕೊಂಡು....
"ಹೂಂ! ಹೋಗಲಿ ಆ ಟ್ರಂಕೆರಡು ಕೆಳಗೇ ಇರಲಿ ಮಿಕ್ಕಾದ್ದೆಲ್ಲಾ ವಾಪಸ್ ಕೊಡು" ಎಂದಾಗ "ಕೆಳಕ್ಕಿಳಿಯಿರಿ ಕೊಡ್ತೀನಿ" ಎಂದು ಕೆಂಗಣ್ಣು ಬೀರಿದಳು. ಇಳಿದೆ. ರಮರಮನೆ ಎಸೆದಳು ಆ ಸಾಮಾನನ್ನು ಮತ್ತೆ ಅಟ್ಟದ ಮೇಲೆ. ತೆಪ್ಪಗೆ ಏಣಿ ಹಿಡಿದು ಹಿತ್ತಲು ಸೇರಿದೆ.

ನಡುಮನೆಗೆ ಬಂದು ಬೀರು ಬಾಗಿಲು ತೆಗೆದಾಗ ರಾಶಿ ರಾಶಿ ತುಂಬಿತ್ತು ಬಟ್ಟೆ. ಹರುಕು ಚೀಲ, ತೇಪೆ ಅಂಗಿ, ಜೂಲುಜೂಲು ಪ್ಯಾಂಟು—ತೋಳು ತೂತು ಕೋಟು—ಕೊಂಕಳು ಇಲ್ಲದ ಅಂಗಿ ...ಎಲ್ಲಾ ತೆಗೆದು ಒಗೆದು ಇಸ್ತ್ರೀ ಮಾಡಿಸಿ ಯಾಕೆ ನೀಟಾಗಿ ಜೋಡಿಸಿಡಬಾರದು? ಈ ಹೆಂಗಸರನ್ನ ನೆಚ್ಚಿ ಕೊಂಡರೆ ಒಂದು ಕೆಲಸವೂ ಆಗೋಲ್ಲ ಎಂದು ಅಸ್ತವ್ಯಸ್ತವಾದ ಚಿಂದಿ ರಾಶಿ ಯನ್ನು ಹೊರಕ್ಕೆಳೆದು ಹಾಕಿದೆ. ಆಳೆತ್ತರ ಬಿತ್ತು ಆ ವಸ್ತ್ರ ಸಂಪತ್ತು. ಆ ಬೀರುವಿನ ಕೆಳಗಿನ ಖಾನಿಯಲ್ಲೇ ಇದ್ದದ್ದು ನನ್ನ ಹಳೇ ಕಾಗದ ಪತ್ರಗಳು.... ಖಾನಿ ಎಳೆದಾಗಲೇ ನನಗೆ ಅನಿಸಿದ್ದು ಈ ಕಾಗದಪತ್ರಗಳಲ್ಲಿ ಬೇಡಾದ್ದೆಲ್ಲಾ ಬಿಸಾಡಿ ಬೇಕಾದ್ದು ಮಾತ್ರ ಯಾತಕ್ಕೆ ವಿಂಗಡಿಸಬಾರದೂ?....ಹೌದು ಹೇಗಿದ್ದರೂ ಭಾನುವಾರ ಬಿಡುವು ಎಂದು ಆ ವಸ್ತ್ರರಾಶಿಯನ್ನು ಅತ್ತ ತಳ್ಳಿ ಕಾಗದದ ಕಂತೆ ಹರಡಿಕೊಂಡು ಕುಳಿತೆ. ಒಂದೇ ಎರಡೇ ಸಾವಿರಾರು ಕಡತಗಳು ಒಂದು ಕಟ್ಟುಬಿಚ್ಚಿ ಹರಡುವುದರಲ್ಲಿ ನನ್ನೆರಡು ಕುನ್ನಿಗಳೂ ಮಿಕ್ಕೆರಡು ಗಂಟು ಬಿಚ್ಚಿದ್ದರು. "ಹೇ!—ಏ! ಸುಮ್ಮನಿರು" ಎಂದೆನ್ನುತ್ತಾ ತೊಡಗಿದ್ದೆ ವಿಂಗಡಿಸುವ ಮಹಾ ಕಾರ್ಯದಲ್ಲಿ. ಹುಡುಗರಿಬ್ಬರೂ ಸರ್ಕಸ್ಸಿಗೆ ಪ್ರಾರಂಭಿಸಿದ್ದರು ಆ ಬಟ್ಟೆ ರಾಶಿ ಮೇಲೆ. ಇಡೀ ನಡುಮನೆ ಚೆಲ್ಲಾಪಿಲ್ಲಿಯಾಗಿತ್ತು ಬಟ್ಟೆಗಳಿಂದ, ಕಾಗದದ ಚೂರುಗಳಿಂದ. ನನ್ನ ವೈರಿ ಸಾಂಬಶಿವನ ಪತ್ರಗಳು ನನಗೆ ಕಾಣುತ್ತಲೂ ಕೋಪ ಉಕ್ಕೇರಿ ಹರಿದು ಹರಿದು ಬಿಸುಡುತ್ತಿದ್ದೆ ಅವನ ಪತ್ರಗಳನ್ನು. ಹಳೆಯ ಕಾಲದಲ್ಲಿ ಅವನು ಹಾಕಿದ ಒಂದೊಂದು ಟೋಪಿಯೂ—ಮಾಡಿದ ಒಂದೊಂದು ಕೃತ್ರಿಮವೂ ಕಣ್ಣಿಗೆ ಬೀಳುತ್ತಲೂ ಹಲ್ಲು ಕಚ್ಚಿ ಹರಿದು ಎಸೆಯುತ್ತಿದ್ದೆ ಆ ಶೂಲದಂತಹ ಪತ್ರಗಳನ್ನು. "....ನೀನು ಕೊಡುವ ಬಾಕಿ ಕೂಡಲೇ ಕಳಿಸದಿದ್ದಲ್ಲಿ........ನಮ್ಮ ಹೋಟಲಲ್ಲಿ.........ಇದ್ದು ತೀರಿಸು ನಿನ್ನದೇನು ಮುಲಾಜು...." ಎಂಬ ಹೋಟಲು ಕಾಳಿಂಗರಾಯನ ವಿಷಪೂರಿತ ಪತ್ರ ಕಣ್ಣಿಗೆ ಬೀಳುತ್ತಲೇ ಹೌಹಾರಿ ಕಿರಿಚಿ ಹಲ್ಲುಕಚ್ಚಿ ರಟ್ಟನಿಂದ ಕಿತ್ತೆಸದೆ ಆ ಕಾಳಿಂಗ ರಾಯನ ಪತ್ರ. ಅದೇ ಕಾಳಿಂಗರಾಯನ ಕಂತೆಯ ಕಡೆ ಮತ್ತೆ ಕೈಹಾಕಿ ಅವನ ಪತ್ರವ್ಯವಹಾರವನ್ನೆಲ್ಲಾ ಸುಟ್ಟು ಬೂದಿ ಮಾಡಿ ಮುಂದಿನ ಕೆಲಸವೆಂದು ಬೀರುವಿನ ಮೂಲೆಗೆ ಕೈಹಾಕಿ "ಕಾಳಿಂಗಾ!!" ಎಂದೆ.... "ಹಾ! ಅಯ್ಯೋ....

ಏನಾನೂ ಅಬ್ಬಬ್‌ಬ್ಬಬ್ಬ....ಛಿ ಛಿ ಛಿ!.....ರಾಮ ರಾಮ.....ಅಯ್ಯಯ್ಯೋ...." ಎಂದು ಲಬೋ ಲಬೋ ಪ್ರಾರಂಭಿಸಿದೆ.....ಗಾಬರಿಯಾದ ಅರ್ಧಾಂಗಿ ಓಡಿ ಬಂದಳು. ".....ಏನೂಂದ್ರೆ ....ಏನಾಯ್ತೂಂದೆ....." ಎಡಗೈಯಿಂದ ಬಲ ಮುಂಗೈ ಬಿಗಿಯಾಗಿ ಹಿಡಿದು...." ಅಬ್ಬಬ್....ಕಾಳಿಂಗಾ....ಕಾಳಿಂಗಾ!.... ನೋಡೇ ಆ ಮೂಲೇಲಿ....ಡಾಕ್ಟ್ರನ್ನ ಕರಿಯೇ" ಎಂದು ಒಂದೇ ಸಮ ಶಂಖ ಪೂರೈಸಲು ಪ್ರಾರಂಭಿಸಿದೆ. ಮೂಲೆಯಲ್ಲಿನ ಕೋಲಿನಿಂದ ಕಾಗದದ ಕಂತೆ ಕೆದರಿದಳು....ಹೊರಟಿತು ಹೊರಗೆ ರೇಗಿದ ಕೆಂಜೇಳು ಅದನ್ನು ನೋಡಿ ಮತ್ತೂ ಏರಿತು ವಿಷ ಕೊಂಕುಳತನಕ. "ಬಡುಕೊಂಡೆ ಕೇಳಿದಿರಾ ನನ್ನ ಮಾತು.... ನೀವು ಮನೆ ಚೊಕ್ಕಟ ಮಾಡೋದೂ ಸಾಕು....ಈ ಕರ್ಮವೂ ಸಾಕು...." ಎಂದು ರಪರಪನೆ ರಾಚಿದಳು ಆ ವೃಶ್ಚಿಕಕ್ಕೆ. ತೀರಾ ಶಿಸ್ತಿನವರೂ .. ಕೊಂಚವೂ ಕೊಳಕು ಸೋಂಭೇರಿತನ—ಕೆದರಿದ ಸಾಮಾನು ಸಮೂಹ ಕಂಡರೂ ಕೆಂಡ ವಾಗುವ ನಮ್ಮ ಅಪ್ಪ ಅಂದೇ ಬಂದರು ಊರಿಂದ. ....ನನ್ನ ಪ್ರಾಣ ಹೇಗೆ ಉಳಿಯಿತೋ ಅವರನ್ನು ಕಂಡು ಮೀನಾಕ್ಷಿ ತಾಳಿಗೇ ಗೊತ್ತು.

ಮೀನಾಕ್ಷಿಗೆ ....ತಂದೆಯವರಿಗೆ ಇಡೀ ಒಂದು ವಾರ.....ಮತ್ತೊಂದು ಭಾನುವಾರದವರೆಗೆ ಕೆಲಸ ಹಿಡಿಯಿತು ನಾನು ಮಾಡಿದ ಅವ್ಯವಸ್ಥೆ ಸರಿಪಡಿಸೊ ದಕ್ಕೆ. ಮರು ಭಾನುವಾರದಿಂದ ಬಾಯಿಮುಚ್ಚಿಕೊಂಡು ಕಟ್ಟೆಗೆ ಡಿಪೋಕ್ಕೆ ಹೋಗಿ ಹಾಯಾಗಿ ಕ್ಯೂನಿಂತು ಊಟದ ಹೊತ್ತಿಗೆ ಬಂದು ಬೆಂದದ್ದು ತಿಂದು ಮುದುಡಿ ಮಲಗತೊಡಗಿದೆ. ನನಗೇಕೆ ಬೇಕು ಇಲ್ಲದ ಹವ್ಯಾಸ?

— ದಾಶರಥಿ ದೀಕ್ಷಿತ್.



ಆಂಬ್ಯುಲೆನ್ಸ್ ಸಾರಥಿ :—ಇಲ್ಲೇ! ಇರು! ಆಸ್ಪತ್ರೇಗೆ ಒಳಗಿರೋ ರೋಗೀನ್ನ ಸೇರಿಸಿ ಆಮೇಲೆ ನಿನ್ನನ್ನು ಕರೆದುಕೊಂಡು ಹೋಗ್ತೀನಿ.

ನಂಬಿ ಕೆಟ್ಟ

ಈಗಿನ ವಿದ್ಯಾಭ್ಯಾಸ ಕ್ರಮವನ್ನು ಪರಿಷ್ಕರಿಸಿ, ಆಧುನಿಕ ಪ್ರಪಂಚಕ್ಕೆ ತಕ್ಕಂತೆ ಮಾರ್ಪಡಿಸುವುದು ಅತ್ಯಗತ್ಯ ಎಂದು ನಾನೂ ಒಪ್ಪುತ್ತೇನೆ. ಇದಕ್ಕಾಗಿ ಸದ್ಯದಲ್ಲೇ ಮತ್ತೊಂದು ಸಮಿತಿಯನ್ನು ರಚಿಸುವ ಉದ್ದೇಶ ನಮ್ಮ ಘನ ಸರ್ಕಾರಕ್ಕಿದೆಯಂತೆ. ಹೀಗೆ ರಚನೆ ಮಾಡುವಾಗ ನನ್ನ ಸ್ನೇಹಿತ ತಿಮ್ಮರಾಯನನ್ನು ಆ ಸಮಿತಿಗೆ ಸೇರಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಏಕೆಂದರೆ, ತಿಮ್ಮರಾಯನಷ್ಟು, ತೀವ್ರವಾಗಿ ಆಧುನಿಕ ವಿದ್ಯಾಭ್ಯಾಸ ಕ್ರಮವನ್ನು ಟೀಕಿಸುವವರು ನಮ್ಮೂರಲ್ಲಿಲ್ಲ. ಸತ್ಯಂವದ, ಧರ್ಮಂಚರ, ಎಲ್ಲರೂ ಅಣ್ಣ ತಮ್ಮಂದಿರು, ಅಹಿಂಸಾಪರಮೋಧರ್ಮ, ಎಂದೆಲ್ಲ ಎಳೆಯ ಮಕ್ಕಳ ಮನಸ್ಸಿಗೆ ತುಂಬಿ, ಅವರನ್ನು ಜೀವನ ಸಂಗ್ರಾಮಕ್ಕೆ ನೂಕುವುದು ಶಿಶು ಹಿಂಸೆ ಎಂದು ಅವನು ಅನೇಕ ವರ್ಷಗಳಿಂದಲೂ ವಾದಿಸುತ್ತಿದಾನೆ.

ಅಲ್ಲದೆ, ಅವನ ಮಕ್ಕಳನ್ನು ಅವನು ತನ್ನದೇ ಆದ ಹೊಸ ಪದ್ಧತಿ ಪ್ರಕಾರ ತಯಾರುಮಾಡುತ್ತಿರುವನು. ತಿಮ್ಮರಾಯ ಸಾಹಸಿ, ಧೀರ, ಎಂಟು ಮಕ್ಕಳ ತಂದೆ, ಎಂಟೆರ್ದೆಯ ಸಂಶೋಧಕ. ಅವನ ಶಿಕ್ಷಣ ಕ್ರಾಂತಿಯನ್ನು ಒಂದು ಉದಾಹರಣೆಯಿಂದ ವಿಶದೀಕರಿಸಬಹುದು.

ಮೂರು ವರ್ಷದ ಸಚ್ಚಿಯನ್ನು ಅವನು ತನ್ನ ಕೋಣೆಯಲ್ಲಿನ ಬೀರುವಿನ ಮೇಲೆ ಕೂರಿಸಿದ. ಹುಡುಗ ಕಿಟ್ಟೋ ಎಂದು ಕಿರಿಚಿಕೊಂಡು, ಗಡಗಡ ನಡುಗಿದನು. ಕೆಳಗೆ ನಿಂತು ತಿಮ್ಮರಾಯ ಕೈನೀಡಿ, "ಸಚ್ಚಿ! ಧುಮುಕು!" ಎಂದ. "ಅಯ್ಯೋ! ನನಗೆ ಹೆದರಿಕೆಯಾಗುತ್ತೆ....ನೀನೇ ಇಳಿಸು .. ಆಳ ಬಹಳ.... ಬಿದ್ದುಬಿಡ್ತೇನೆ" ಎಂದು ಸಚ್ಚಿ ಕೂಗಿದ. "ನನ್ನ ಮಾತು ಕೇಳೋ... ನಿನಗೆ ಏನೂ ಆಗುವುದಿಲ್ಲ....ನಾನಿದೇನೆ ... ನಾನು ಹಿಡಿದು ಕೊಳ್ಳುತ್ತೇನೆ" ಎಂದ ತಿಮ್ಮರಾಯ ಹಾಲು ಜೇನು ಸುರಿಯುವ ಮಾತಿನಲ್ಲಿ. "ಊ ಹೂಂ .. ನನ್ನಿಂದಾಗೋದಿಲ್ಲ" ಎಂದ, ಸಚ್ಚಿ, ಗೋಳಾಡುತ್ತ. "ಲೋ! ನನ್ನನ್ನ ನಂಬೋ.... ನಾನು ಹಿಡಿದುಕೊಳ್ಳುತ್ತೇನೆ" ಎಂದು ಕೈ ನೀಡಿದ, ತಿಮ್ಮರಾಯ. ಕೊಂಚ

ಹೊತ್ತು ಗೊಣಗಿದನಂತರ, ಸಚ್ಚಿ ಧುಮುಕಿದ. ತಿಮ್ಮ ಕೈ ಬಿಟ್ಟ! ಪಾಪ, ಹುಡುಗ ನೆಲಕ್ಕೆ ಬಿದ್ದು ಮಂಡಿ ಮುರಿದು ಮೂರು ತಿಂಗಳು ಹಾಸಿಗೆ ಹಿಡಿದ.

ತಿಮ್ಮರಾಯ ಹೀಗೇಕೆ ಮಾಡಿದ. ಗೊತ್ತೆ? ಅದೇ ಅವನ ಶಿಕ್ಷಣ ವೈಖರಿ! ಅದಕ್ಕೋಸ್ಕರವೇ ಅವನನ್ನು ಸುಧಾರಣಾ ಸಮಿತಿಗೆ ಸೇರಿಸಲೇ ಬೇಕೆಂದು ನಾನು ಸಲಹೆ ಮಾಡುತ್ತಿರುವುದು.

"ಮುಂ.... ಗಂಡ? ಈಗಿನ ಸ್ವತಂತ್ರ ಭಾರತದಲ್ಲಿ ಯಾರನ್ನೂ ನಂಬ ಕೂಡದು, ಒಬ್ಬರ ಮಾತನ್ನೂ ನಿಜ ಅಂತ ತಿಳಿಯಬಾರದು, ಅಂತ ಮಕ್ಕಳಿಗೆ ತಿಳಿವಳಿಕೆ ಕೊಡೋದು ತಂದೆಯ ಕರ್ತವ್ಯ" ಎಂಬುದು ಅವನ ಸಿದ್ಧಾಂತ.

ಅದು ತಪ್ಪೆಂದು ಸಾಧಿಸಲು ಯಾರಿಗೆತಾನೆ ಎದೆ ಇದೆ?

—ಕಾಮತ್.



ಕವಿಯಾಗ ಬಯಸುವೆಯಾ ?

(ಒಂದು ಸಲಹಾ ಪದ್ಯ)

ಹಿಡಿದು ನಿಲ್ಲಿಸು
ಬಡಪಾಯಿ ವಾಚಕನ !

ಕಿರಿದೆರಡು ಪಂಕ್ತಿಗಳು ಬೇಕು ಮೊದಲು ;
ನಡೆಸು ಮತ್ತವನನ್ನು ತಾಳ ಮೇಳಗಳಿಂದ ;
ಜೊತೆಯಲೇ ಬರುವನವ ಕೊನೆಯತನಕ—
ಬಲಿಗೆ ಬಿದ್ದಾಯಿತವ; ತೊಳಲಿ ಬಳಲಲಿ ಕೊಂಚ
ಹಾಕು ನೀ ಹೊಂಚ.
(ಕೊಡು ಮೆಲ್ಲಗೆ ತ್ರಾಸ.
ನೋಡಿದಿರ, ಪ್ರಾಸ !)
ಏನೊ ಎಂತೋ ಎಂದು ಪುಟ ತೆರೆಯೆ, ಪಾಪಿ
ಬಿದ್ದ, ಸದ್ದಿಲ್ಲದೇ...........ತೆರೆದ ಪಾಪಿ !

ಈಗ ನೀ ಲೇಖನಿಯನದ್ದಿ ಮಸಿಯಲಿ ತಿದ್ದಿ
ಬೆರಗು ಬಡಿಯಲು ಬೇಕು, ಸರ್ಕಸಿಗನಂತೆ ;
ಒಳಗಿನಿಂದಲೆ ಅವನು, ಮುಳುಮುಳುಗಿ ತಾನೆಂಥ
ಹೊಳೆವ ಪಂಡಿತ, ಎಂದು ಎದೆಯ ಬಡಿವ.

ಕಲೆಗಾರ ನೀನೆಂದು, ಅವನಿಗನಿಸಲಿ ಎಂದು,
ಅಂತ್ಯ ಪ್ರಾಸದ ಕೂಡೆ, ನಡುವಣದು ಮಾಡೆ.......... ....
....
ಅಯ್ಯೊ ! ಏಂ ದಡ್ಡತನ !
ಏಂ ಮರೆವೆ, ಎನ್ನದು !
ಮುಖ್ಯವಾದದ್ದನ್ನೆ ಬಿಟ್ಟೆನಲ್ಲಾ !:—
ನವ್ಯಮಯ ದಾರಿಯದು, ಭವ್ಯತರ ಪಟ್ಟು
ಹಿಂದಿನವರಾರಿಗೂ ಗೊತ್ತಿಲ್ಲ ಗುಟ್ಟು !

ಅವರೆಲ್ಲ ಭೋಗಿಗಳು, ತಪ್ಪಿದರೆ ಯೋಗಿಗಳು,
ರೋಗಿಗಳೆ ಅಲ್ಲ ಆ ಕಾಳಿದಾಸಾದಿಗಳು.
ಕಣ್ಣು ನೋವಿಲ್ಲದವ ಕವಿ ಎನಿಸಬಲ್ಲನೆ?
"ಹುಣ್ಣು! ಹೂ" ಎನ್ನದವ ಹೆಣ್ಣ ಬಣ್ಣಿಪನೆ?
ಅರಶಿನದ ಕಾಮಾಲೆ, ಅತಿಸಾರ, ತಲೆನೋವು,
ಹೊಟ್ಟೆ ಕಿಚ್ಚಿವು ಮುಖ್ಯ ಅಧುನಿಕ ಕವಿಗೆ.
ಆವಗೆ ಪಿತ್ತವು ನೆತ್ತಿಗೇರಿರಲುಬೇಕು;
ಪಕ್ಷಪಾತದ ಕುತ್ತವಕ್ಷಿಯಲಿ ಬೇಕು.
ಕಂಡದೆಲ್ಲವು ಕೆಂಡ, ಕಾಂಬರೆಲ್ಲರು ತುಂಡ;
ಗಂಡ ಹೆಂಡಿರ ಲಗ್ನ ಅಗ್ನಿಕುಂಡ;
ಪಾದಕಮಲವೆನಲು ರೋಸಿ
ಅವನೆಲಿಘಂಟಿಯಾಸಿ!
(ಕೇಳಿದಿರ! ಹೊಸ ಮಾತು
ಹೇಗೆ ನೆಯ್ದೆನು ಕೂತು!)
ತೋರ್ಪುದೆಲ್ಲವು ಭ್ರಾಂತಿ,
ಮಾಳ್ಪುದೆಲ್ಲವು ಕ್ರಾಂತಿ,
ಮೂಕವಿಗೆ ಈಗ.
ರಕ್ತವನೆ ಕಾರುವನು
ಕ್ಷಯ ರೋಗಿಯಂತೆ.

— ಶಾಟಾಳಿ.

ರೈಲು

ಬೆಳಗಿನಿಂದಲು ಮುಳುಗುವವರೆಗೂ ನೂಕುನೂಕಲಿ ಹೋಗಬೇಕೆ?
ಬೆಳಗಿನಿಂದಲು ಮುಳಗುವರೆಗೂ.
ಹಗಲು ಹನ್ನೆರಡೆಲ್ಲ ನಾನು ಈ ಕಾಲಮೇಲೆಯೆ ನಿಲಲು ಬೇಕೆ?
ಹಗಲು ಹನ್ನೆರಡೆಲ್ಲ ಗಂಟೆಯು.
ಹಸಿವನೀಗಲು ಒಸಿಯ ಕೊಳ್ಳಲು ಇಳಿಯಬಹುದೆ ದಾರಿಯಲ್ಲಿ?
ಇಳಿದೆಯಾದರೆ ಉಳಿದೆಯಲ್ಲೇ.
ಇಂಥ ತಪಸಿಗೆ ನಿಂತ ಗೋಳಿಗೆ ಕೊಡುವ ಹಣವದು ಕಮ್ಮಿಯೆ?
ಆರು ತಿಂಗಳಿಗೊಮ್ಮೆ ಜಾಸ್ತಿ.

ಕೊರವಾವಲೋಕನ

ಬಿಸಿಲು ಮಳೆ ಹುಯ್ತಾ ಇದ್ದ ಸಾಯಂಕಾಲ, ಸ್ಟ್ಯಾಲಿನ್ನನ ಮಗಳನ್ನು ಟ್ರೂಮನ್ನನ ಮಗನಿಗೆ ಕೊಟ್ಟು ಮದುವೆ ಮಾಡಬಹುದಾದ ಸುಮುಹೂರ್ತ. ಆಟೋ ರಿಕ್ಷಾದಿಂದ ಕ್ಲಬ್ಬಿಗೆ ಬಂದ ಕೊರವ. ಠೀವಿಯಿಂದಲೇ ಒಳಕ್ಕೆ ಕಾಲಿಟ್ಟ. ಮುಚ್ಚಿದ ಕಾಲರಿನ ಅಂಗಿ, ಬಿಳಿ ಷರಾಯಿ, ಬರ್ಮಾ ಚಪ್ಪಲಿ. ಆ ಅಂಗಿಗೆ ಒಂದು ಸೊಗಸಾದ ರೋಜಾ ಹೂವು ಮಧ್ಯೆ ಸಿಕ್ಕಿಸಿದ್ದಾನೆ. ಬೋಳು ತಲೆ. ರಂಗಿನ ಕುಟಿ, ಕೈಲೊಂದು ಕೋಲು. ದಿನಾಲೂ ಠೀಕ್ ಠಾಕಾಗಿ ಬರೋನು ಇವತ್ತೇನು ಹೀಗೆ ಭಾರತದ ರಾಷ್ಟ್ರೀಯ ಉಡುಪು ಧರಿಸಿ ಬಂದಿದ್ದಾನಲ್ಲಾ! ಎನ್ನಿಸಿತು.

ಬಂದವನು ನನ್ನನ್ನೇ ಹಿಡಿದ. ಎಲ್ಲರೆದುರಿಗೂ ಕೇಳಿದ. "ಎಲ! ಎಲಾ! ನೀನೇಕೋ ಇಂಗ್ಲೆಂಡಿಗೆ ಹೋಗುಲ್ಲ. ಅಲ್ಲಿ ಹಬ್ಬವಂತಲ್ಲೋ ಅಂತ.

"ಅವರಿಗೆ ಹಬ್ಬ ಆದರೆ ನನಗೇನು ಶುಭ" ಎಂದೆ.

"ಎಲಾ! ಎದುರು ಮಾತು ಆಡೋ ಹಾಗಾದೆಯಾ! ಈಗ ತಾನೇ ಒಂದು ಟೀ ಪಾರ್ಟಿಯಿಂದ ಬಂದೆ. ಸೊಗಸಾದ ತಿಂಡಿ. ಪಕ್ಕದ ಕುರ್ಚಿ ಖಾಲಿ. ಹಾಗೂ ಪಕ್ಕದ ತಟ್ಟೆಯನ್ನು ಖಾಲಿ ಮಾಡಿದೆ. ಯಾರೋ ಕಂಪೆನಿ ಅಧ್ಯಕ್ಷ. ವ್ಯಾಪಾರದ ಸಲುವಾಗಿ ಇಂಗ್ಲೆಂಡಿಗೆ ಹೊರಟಿದ್ದಕ್ಕೆ ಮಿಕ್ಕವರು ಕೂಟ ಏರ್ಪಡಿಸಿದ್ದರು. ಬಂದವರೆಲ್ಲಾ ಒಬ್ಬರನ್ನೊಬ್ಬರು "ನೀನು ಯಾವಾಗಲೋ ಹೋಗೋದು, ನಿನ್ನ ಯಾರು ಕಳಿಸ್ತಾರೆ" ಎಂದೇ ಕೇಳ್ತಿದ್ದರು. ಅದಕ್ಕೇ ನಿನ್ನ ಕೇಳಿದೆ. "ನೀನು ಯಾವುದೋ ಕಂಪೆನಿ ಅಧ್ಯಕ್ಷ ಅಲ್ಲವೇನೋ? ಯಾವಾಗಲೋ ಹೊರಡೋದು?" ಅಂದ.

"ಹೇಗೆ ಹೇಳಿಕೊಳ್ಳಲಿ, ಆ ಕುಹಕಿ ಹತ್ತಿರ. ನಾನು ಖದ್ದರ್ ಕಂಪೆನಿ ಅಧ್ಯಕ್ಷ. ಆ ವ್ಯಾಪಾರಕ್ಕೆ ಇಂಗ್ಲೆಂಡಿನಲ್ಲಿ ಏನೂ ಸೌಕರ್ಯ ಇಲ್ಲಾ ಅಂತ. ತೆಪ್ಪನಿದ್ದೆ.

* * *

ಏಳು ಗಂಟೆಗೆ ರಂಜಾನ್ ಸೂಚಿಸುವ ಗುಂಡು ಹಾರಿದ ಶಬ್ದ ಕೇಳುವ ಹೊತ್ತಿಗೆ, ಅರ್ಧಂಬರ್ಧ ಕಾಣುತ್ತಿದ್ದ ವಿಭೂತಿ ಪಟ್ಟೆ, ಹುಬ್ಬಿನ ಮಧ್ಯೆ ಕುಂಕುಮ ಇವುಗಳಿಂದ ಅಲಂಕೃತನಾಗಿ ಕೊರವ ನನ್ನ ಮೇಜಿನ ಹತ್ತಿರಕ್ಕೇ ಬಂದ, ಕ್ಲಬ್ಬಿನಲ್ಲಿ.

ಮಾತಾಡದೇ ಎದುರು ಕುರ್ಚಿಯಲ್ಲಿ ಕುಳಿತ. ಮುಖವೆಲ್ಲಾ ಗೆರೆ ಗೆರೆಯಾಗಿತ್ತು. ನಿಮಿಷಕ್ಕೆರಡು ಸಾರಿ ನಾಲಿಗೆಯಿಂದ ಒಣಗಿದ ತುಟಿಗಳನ್ನು

ಒದ್ದೆ ಮಾಡಿಕೊಳ್ಳುತ್ತಿದ್ದ. ಏನೋ ಆಗಿದೆ ಇವತ್ತು ಇವನಿಗೆ ಅಂತ ನನಗೂ ತಿಳಿಯಿತು. ದುಃಖಕಾಲದಲ್ಲಿ ಸಾವಧಾನವಾಗಿ ಸಾಗಬೇಕು ಎಂದು ನಾನೂ ಸುಮ್ಮನಿದ್ದೆ. ಮೂರು ಜನ "ಬಾಯ್"ಗಳು ಹತ್ತಿರ ಸುಳಿದು ಹಿಂತಿರುಗಿ ಹೋದರು. ಅಷ್ಟು ಹೊತ್ತು ಎಲ್ಲವೂ ಮೌನ.

ನನ್ನ ಬಾಯಿ ಮಾತನಾಡದಿದ್ದರೂ, ನನ್ನ ಹುಬ್ಬು ಪ್ರಶ್ನಾರ್ಥ ಸೂಚಿಯಾಗಿತ್ತು. ಅದನ್ನು ನೋಡಿ ಕೊರವ ಮೆಲ್ಲಗೆ ಗೋಗರೆದ

"ನೋಡು! ನಾಳೆ ನಮ್ಮ ರಾಜು ಮಗನ ಉಪನಯನ. ನನ್ನನ್ನು ಬ್ರಹ್ಮ ಸಂಜ್ಞೆಗೆ ಅಂತ ಊಟಕ್ಕೆ ಕರೆದಿದ್ದಾನೆ. ಕಳೆದ ಮೂವತ್ತು ವರ್ಷಗಳಿಂದಲೂ ನಾನು ಜನಿವಾರ ಹಾಕಿದ್ದಿಲ್ಲ. ಕೆಲಸಮಾಡುವಾಗ ತೋಳಿಳಿದು ಕೈಗೆ ಅಡಚಣೆ ಮಾಡಿದ ಕಾರಣ ಯೌವನದಲ್ಲೇ ಅದನ್ನು ಕನ್ನಡಿ ಗೂಟಕ್ಕೆ ಹಾಕಿದೆ. ಈ ದಿನ ಬೆಳಗ್ಗೆ ಹುಡುಕಿ ಹುಡುಕಿ ಸಾಕಾಯ್ತು. ಮನೇಲಿ ಮೂರೆಳೆ ಜನಿವಾರ ಸಿಗಲಿಲ್ಲ. ಹೋಗಲೀ ಅಂಗಡೀಲಾದರೂ ಸಿಗುತ್ತೆಯೋ ಅಂತ ನೂಲಂಗಡಿಗೆ ಹೋಗಿ ಒಂದು ಜತೆ ಫಿನ್ನೆ ಜನಿವಾರ ಕೊಡಿ ಅಂದೆ ಇಲ್ಲಾ ಅಂದರು. ಮಹಾ ಮಹಾ ಬಿನ್ನಿ ಮಿಲ್ಲಿಗೆ ಹೋಗಿ ಕೇಳಿದೆ. ಅದರ ಹೆಸರೇ ಕೇಳಿಲ್ಲ. ಅದನ್ನು ಗಂಡಸರು ಉಡುತ್ತಾರೆಯೋ? ಹೆಂಗಸರೇ? ಅಥವಾ ಮಕ್ಕಳೇ ಅಂತ ಕೇಳಿದರು. ಹೋಗಲೀ ರೇಷ್ಮೆದಾದರೂ ಚಿಂತೆಯಿಲ್ಲ ಅಂತ ರೇಷ್ಮೆ ದುಕಾನಿನಲ್ಲಿ ಕೇಳಿದೆ. ಯಾವ ವಾರ ಅಂತ ಅವರು ಕೇಳಿದರು. ಮೂರು ಸಾರಿ ಜನಿವಾರ ಅಂತ ಬಿಡಿಸಿ ಹೇಳಿದೆ. , ಸೆಕ್ರೆಟೇರಿಯಟ್ಟಿಗೆ ಹೋಗಿ ಒಂದು ಪರ್ಮಿಟ್ ತನ್ನಿ ಎಲ್ಲಾದರೂ ತರಿಸಿಕೊಡುತ್ತೇವೆ ಎಂದರು. ಅಲ್ಲಿಗೆ ಹೋಗಿ ಈ ವಾತಾವರಣದಲ್ಲಿ ಈ ಮಾಲು ಕೇಳಲು ನನಗೆ ಭಯ. ಈಗ ದೊಡ್ಡ ಯೋಚನೆಗಿಟ್ಟುಕೊಂಡಿದೆ. ನಾಳೆ ಬ್ರಹ್ಮಭೋಜನಕ್ಕೆ ಹೇಗೆ ಹೋಗಲಿ" ಅಂತ. ಅತ್ತೇಬಿಟ್ಟ.

ಹೆದರಬೇಡ ಕೊರವಾ, ನನ್ನ ಜನಿವಾರ ನಿನಗೆ ಎರವಲು ಕೊಡುತ್ತೇನೆ ಬಾ ಎಂದು ಡ್ರೆಸಿಂಗ್ ಕೊಠಡಿಗೆ ಕರೆದುಕೊಂಡು ಹೋದೆ. ಬನೀನು ತೆಗೆದಾಗಲೇ ನನಗೆ ಗೊತ್ತಾಗಿದ್ದು. ನನಗೂ ಜನಿವಾರ ಇಲ್ಲ ಅಂತ.

ಆಗ ಕೊರವ, ಹೇಗೂ ಸೂಕ್ಷ್ಮ ಬುದ್ಧಿ. ಹೊರಗಿದ್ದ ಬನಿಯನ್ನು ಹುಡುಕಿ ಒಂದು ಜತೆ ಮಾಸಿದ ಜನಿವಾರ ತೆಗೆದು ತಾನು ಹಾಕಿಕೊಂಡ.

* * *

ಕ್ಷಿತಿಜದಿಂದ ಬಾನಲೆಲ್ಲಾ ಒಂದು ಕಾಮನಬಿಲ್ಲು ಹರಡಿತ್ತು. ನೋಡುಕ್ಕೆ ಎರಡು ಕಣ್ಣು ಸಾಲದು. ಕೋಗಿಲೆ ಕುಹೂಯಾಡುವುದು ಹಾಗಿರಲಿ, ನವಿಲು ಪುಕ್ಕ ತೆರೆದುಕೊಂಡು ಕುಣಿಯುವುದು ಹಾಗಿರಲಿ, ನಮ್ಮ

ಕವಿಗಳು ಪದ್ಯ ಪಲುಕುವುದು ಹಾಗಿರಲಿ, ಕ್ಲಬ್ಬಿನಲ್ಲಿ ಕಾರದ ವಡೆ ತಿನ್ನುತ್ತಿದ್ದ ನನಗೇ ಕಿರಿಚಿ ಕುಪ್ಪಳಿಸಲೇ ಅನ್ನುವಷ್ಟು ಖುಷಿಯಾಗಿತ್ತು.

ಆ ಹೊತ್ತಿಗೆ ರಾಹು ಬಂದು ಅಪ್ಪಳಿಸಿದ ಹಾಗೆ ಕೊರವ ಬಂದು ಬೆನ್ನ ಮೇಲೆ "ಪಿಟ್ಟ" ಹೊಡೆದ.

ಹಿಂತಿರುಗಿ ನೋಡಿದೆ. ಕೊರವನೂ ಕಾಮನ ಬಿಲ್ಲಿನ ಹಾಗೆಯೇ ಕಂಡ. ಕೆಂಪು ಕೋರೇ ರುಮಾಲು, ನೀಲಿ ಅಂಗಿ. ಶುಭ್ರವಾದ ಬಿಳಿ ಪಂಚೆ ಕಚ್ಚೆ. ಕೈಯಲ್ಲಿ ಹಸುರು ಚೌಕುಳಿಯ ಕರವಸ್ತ್ರ.

"ಏನಯ್ಯಾ! ಇಷ್ಟು ಖುಷಿ" ಎಂದೆ ಬೆನ್ನು ತಡವರಿಸಿಕೊಳ್ಳುತ್ತಾ.

"ಏನಿಲ್ಲ ನೋಡು, ಮಧ್ಯಾಹ್ನ ತೊಗರಿ ನುಚ್ಚಿನ ಉಂಡೆ ಮಾಡಿದ್ದರು. ತಿಂದು ಮಲಗಿದಾಗ ಒಂದು ಸೊಗಸಾದ ಕನಸು ಕಂಡೆ. ಅದನ್ನು ಜ್ಞಾಪಿಸಿ ಕೊಂಡರೇ ಮನಸ್ಸೆಲ್ಲಾ ಖುಷಿಯಾಗುತ್ತೆ ಅಂದ. ಒಂದು ಸಿಗರೇಟ್ ಸಾವಧಾನ ವಾಗಿ ಹೊತ್ತಿಸಿದ. ಕನಸೇನು ಎಂಬ ನನ್ನ ಕುತೂಹಲವೂ ಹೊತ್ತಿಕೊಂಡಿತು. ಆಗ ಮುಂದುವರಿಸಿದ.

"ನೋಡು, ಕನಸಿನಲ್ಲಿ ಕಾಶ್ಮೀರಕ್ಕೆ ರಜಾ ಪ್ರವಾಸಕ್ಕೆ ಹೋಗಿದ್ದೆ. ಸುತ್ತಲೂ ರಸಭರಿತ ಹಣ್ಣುಗಳು. ಚೆಂದುಳ್ಳಿ ಹೆಣ್ಣುಗಳು. ಕಾಶ್ಮೀರ ಶಾಲು ತೊಟ್ಟ ಜನ ಸಂದಣಿ ಆ ಸೊಬಗಿನ ಸಂತೆಯಲ್ಲಿ ಒಬ್ಬಾತನನ್ನು ನೋಡಿದೆ. ಹ್ಯಾಟು ಹಾಕಿದ್ದ ಅವ, ನನ್ನನ್ನು ನೋಡಿ ಹ್ಯಾಟು ತೆಗೆದ. ತಲೆಯ ಮೇಲೆ ಜುಟ್ಟಿನ ಗಂಟಿತ್ತು. ವಾರೇವ್ವಾ! ಎಂದಂದುಕೊಂಡೆ. ಆ ಮೇಲೆ ಮುಖ ನೋಡಿದೆ. ಕನಸಿನಲ್ಲಿ ಹಾಗೇತಾನೇ! ಮುಖದ ತುಂಬಾ ಗಡ್ಡ ಮೀಸೆ. ಓಹೋ ಈತ 'ಸಿಖ್ಖ'ನಿರಬಹುದು ಎಂದು ಹೊಳೆಯಿತು. ಆದರೆ ಕಿರ್ಪಾನ್ ಇರಲಿಲ್ಲ. ಕತ್ತಿನ ಸುತ್ತ ಅಚ್ಚ ಶುಭ್ರದ ಕಾಲರ್ ಇತ್ತು. 'ಅರೆ!' ಅಂತು ಮನಸ್ಸು. ಆ ಕಾಲರಿಂದ ಕಿವಿಗೆ ಕೇಳಿಸುವಂತಹ 'ಟೈ' ಒಂದು ತೂಗು ಬಿದ್ದಿತ್ತು. 'ಎಲಾ ಟ್ರೂಮನ ಮಗನೇ' ಎಂದು ವ್ಯಂಗ್ಯ ಯೋಚನೆ ಹೊರಟಿತು. ದೂರ ದೃಷ್ಟಿಯಿಂದ ನೋಡಿದೆ. ಭರ್ಜರಿ ಇಂಗ್ಲಿಷ್ ಸೂಟ್ ಧರಿಸಿದ್ದ. ಬಲತರ್ಜನಿಯಲ್ಲಿ ಒಂದು ಪವಿತ್ರದ ಉಂಗುರ. ಎಲಾ! ಇಷ್ಟಾದರೂ ಇವನು ಹಿಂದೂವೇ ಅಂತು ಮನಸ್ಸು. ಎಡತೋಳಿನ ಮೇಲೆ 'ಕ್ರೆಸೆಂಟ್' ಚಿಹ್ನೆಯಿತ್ತು. 'ಇದರ ಮರ್ಮ ಏನಿರಬಹುದು' ಅಂತು ಯೋಚನೆ. ಕಾಲಿನ ಕಡೆ ದೃಷ್ಟಿ ಹೊರಳಿತು. ಬಲ ಕಾಲಿಗೆ ಪಾದುಕೆ ಮೆಟ್ಟಿತ್ತು. 'ಓಹೋ! ಗಡ್ಡ ಮೀಸೆ ಪಾದುಕೆ. ಸ್ವಾಮಿ ಜೀ! ಎಂದಿತು ಮನಸ್ಸಿನ ಒಂದು ಕೋಶ. ಎಡಕಾಲು ನೋಡಿದೆ. ಕಿವಿಯಿದ್ದ ಗಿರಿಕಿ ಚಡಾವು. 'ಕ್ಯಾರೇ ಭಯ್ಯಾ!' ಎಂದಿತು ಮನಸ್ಸು ಕ್ಯಾಕರಿಸುತ್ತಾ!

ಕನಸು ಕೂಡ ನನಸಾಗುವುದೆಂದು ಕೇಳಿಲ್ಲವೇ? ಹಾಗಾಗಲು ಒಂದೇ ಮಾರ್ಗ. 'ಯಾರಯ್ಯಾ! ನೀನು' ಅಂತ ಜಬರ್ದಸ್ತಿನಿಂದ ಕೇಳೇಬಿಡೋದು ಅಂತ ನಿರ್ಧರಿಸಿ ಕೇಳಿಯೇಬಿಟ್ಟೆ.


ಅವನೂ ಹೇಳೇಬಿಟ್ಟ. ಮೂಗಿನ ಧ್ವನಿಯಲ್ಲಿ.

'ಗ್ರಾಹಾಂ' ಅಂತ. ನನ್ನ ತಂದೆ ತಾತಂದಿರ ಹೆಸರು ಅವನ ವಿಚಿತ್ರ ಉದರ ನಿಮಿತ್ತಂ ಬಹುಕೃತ ವೇಷ ಭೂಷಣಗಳನ್ನು ಜ್ಞಾಪಿಸಿಕೊಂಡರೆ ನನಗೆ ನಗು ಈಗಲೂ ಬರುತ್ತೆ".

ಅಂತ ಹೇಳಿದ ಕೊರವ.

ಆಗನ್ನಿಸಿತು ನನಗೆ. ಕೊರವ ಅಲ್ಲ ಅತ! ಕೊರಮ ಅಂತ.

— O —



ಯಾವನೋ! ಅದು ಕೂಗೋದು, "ಹೆಚ್ಚು ಕುಕ್ಕ" ಅಂತ.

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಜಾಹಿರಾತಿನ ಸ್ಪರ್ಧೆಯ ಬಹುಮಾನವನ್ನು ಈ ಐದು ಜನಗಳಿಗೆ ಹಂಚಲಾಗಿದೆ.—

ಶ್ರೀಮತಿ ಎಂ. ಎನ್. ತಂಗ
600, ವೆಂಕಟಕೃಷ್ಣ ರೋಡ್, ಮೈಸೂರು.

ಶ್ರೀ ಆರ್ ಶಿವರಾಮಯ್ಯ, ಬಿ.ಎಸ್.ಸಿ.
C4-632, ಈಸ್ವರನ್ ಎಕ್ಸ್‌ಟೆನ್ಷನ್, ಮಂಡ್ಯ.

ಶ್ರೀ ಪಿ. ವಿ. ಕಾನಡೆ
ಬಿಲಾರ್ಡ್ ಎಸ್ಟೇಟ್, ಬೊಂಬಾಯಿ.

ಶ್ರೀ ಕೆ. ಪರಮೇಶ್ವರ ಭಟ್ಟ
ಶುಂಟಿ ಹತ್ಲು, ಶಿವಮೊಗ್ಗ

ಶ್ರೀಮತಿ ಉಮಾದೇವಿ
ಲೋಡಿ ರೋಡ್ ಪೋಸ್ಟ್, ನ್ಯೂ ಡೆಲ್ಲಿ

ಈದ್ ಹಬ್ಬದ ವಿಶೇಷ ಆಕರ್ಷಣೆ !

6-7-1951 ರಿಂದ ಅಮೋಘ ಪ್ರಾರಂಭ

ಬೆಂಗಳೂರು ಮೈಸೂರು

ಸಾಗರ್ — ಮತ್ತು — ರಣಜಿತ್

ಚಿತ್ರಮಂದಿರಗಳಲ್ಲಿ

ತನ್ನ ವಿಚಿತ್ರ ವಿಧಿಯೊಂದಿಗೆ ಹೋರಾಡಿದ ಅಂಧ ಯುವಕನ ನೊಂದ
ಹೃದಯದ ಪ್ರೇಮವನ್ನು ನಿರೂಪಿಸುವ ಹೃದಯಂಗಮ ಕತೆ !

ಫಿಲಂಕಾರ್‌ರವರ

ದೀದಾರ್

(ಹಿಂದಿ)

DEEDAR

ತಾರಾಗಣ :—

ನರ್ಗಿಸ್, ಅಶೋಕ್ ಕುಮಾರ್, ದಿಲೀಪ್ ಕುಮಾರ್,
ಯಾಕೂಬ್, ನಿಮ್ಮಿ


ದಿಗ್ದರ್ಶನ: ನಿತಿನ್ ಭೋಸ್ — ಸಂಗೀತ: ನೌಷದ್

" ಸಾಗರ್ " ಚಿತ್ರಮಂದಿರದಲ್ಲಿ ಬೆಳಗ್ಗೆ 9 ರಿಂದ 12
ಮಧ್ಯಾಹ್ನ 3 ರಿಂದ 5 ರವರೆಗೆ ಬಾಲ್ಕನಿ ತರಗತಿಗಳಿಗೆ
ಮುಂಗಡವಾಗಿ ಟಿಕೆಟ್ ಪಡೆಯಬಹುದು.

★

An EVERSHINE Pictures Release.

ಅಪೂರ್ವ ಕಥಾವಸ್ತುವಿನಿಂದ ಕೂಡಿದ ಚಿತ್ರ!



K & K. ಪ್ರೊಡಕ್ಷನ್ಸ್‌ರವರ

ಪಿಚ್ಚೈಕಾರಿ

(ತಮಿಳು)

ಬೆಂಗಳೂರು

ಶಿವಾಜಿ ಮತ್ತು ಅಪೇರಾ

ಕೆ. ಜಿ. ಎಫ್ ಗೇ ಟಾಕೀಸ್

ದಾವಣಗೆರೆ ಶಾಂತಿ ಪಿಕ್ಚರ್ ಹೌಸ್

ಕಿಕ್ಕಿರಿದ ಪ್ರೇಕ್ಷಕ ವೃಂದಕ್ಕೆ ಪ್ರದರ್ಶಿತವಾಗುತ್ತಲಿದೆ.

A Tallam Release.

REG. NO. M. 4718 KORAVANJI JULY 1951

Printed by B. S. Iyengar, Bangalore City
Publisher—B. N. Gupta. Editor—M. Sivaram.